GOVERNMENT OF KARNATAKA

ENVIRONMENTAL STUDIES

TEXT CUM WORK BOOK

Part - 2

ENGLISH MEDIUM

(Bilingual - English and Kannada)

5

FIFTH STANDARD

@KTBS NOT TO BE REPUBLISHED

KARNATAKA TEXT BOOK SOCIETY (R.)
6th Cross, Malleshwaram, Bengaluru-560 003.

CONTENTS

T7W1X6

SL. NO.	LESSON	PAGE NO.
9.	Food - Essence Of Life	1-20
10.	Residences	21-30
11.	Nature Of Matter	31-69
12.	Elements, Compounds And Mixtures	70-76
13.	Amazing Energy	77-108
14.	The Sky	109-137
15.	Our India - Physical Diversity	138-180
16.	Our India - Political and Cultural	181-214

©KTBS NOT TO BE REPUBLISHED

LESSON - 9

FOOD - ESSENCE OF LIFE

Q7Y6L9

Hasiyade unabeda hasidu matthirabeda
bisigoodi thangalunabeda
vaidyanagasaneye beda Sarvajna.

ಹಸಿಯದೆ ಉಣಬೇಡ ಹಸಿದು ಮತ್ತಿರಬೇಡ
ಬಿಸಿಗೂಡಿ ತಂಗಳುಣಬೇಡ
ವೈದ್ಯನಾಗಸಣೆಯೇ ಬೇಡ ಸರ್ವಜ್ಞ

Observe the tripadi (triplet) of Kavi Sarvajna. In the second line he says not to eat stale food mixing with fresh food. Why does he say so? Think. Write your answer here.

ಸರ್ವಜ್ಞ ಕವಿಯ ಈ ತ್ರಿಪದಿಯನ್ನು ಗಮನಿಸು. ಎರಡನೆ ಸಾಲಿನಲ್ಲಿನ ಬಿಸಿಗೂಡಿ ತಂಗಳುಣಬೇಡ ಎಂದು ಯಾವುದರ ಬಗ್ಗೆ ಹೇಳಿದ್ದಾರೆ? ಯೋಚಿಸು. ನಿನ್ನ ಉತ್ತರವನ್ನು ಇಲ್ಲಿ ಬರೆ.

_____

© KTBS NOT TO BE REPUBLISHED

Yes, this line refers to the food which we eat. Food is the essence of our life. Everyday we do one or the other work. We need energy for doing work. We get energy from the food we eat. Food is necessary for our growth, development and good health. What is there in the food we eat? How should our food be? This unit contains some information about it. Read and understand.

ಹೌದು, ಈ ಸಾಲು ನಾವು ಸೇವಿಸುವ ಆಹಾರದ ಬಗ್ಗೆ ಹೇಳಿದ್ದು. ಆಹಾರ ನಮ್ಮ ಬದುಕಿನ ಜೀವಾಳ. ಪ್ರತಿದಿನ ನಾವು ಒಂದಿಲ್ಲೊಂದು ಕೆಲಸ ಮಾಡುತ್ತಿರುತ್ತೇವೆ. ನಾವು ಮಾಡುವ

ಕೆಲಸಗಳಿಗೆ ಶಕ್ತಿ ಬೇಕು. ನಾವು ಸೇವಿಸುವ ಆಹಾರದಿಂದ ನಮಗೆ ಶಕ್ತಿ ದೊರೆಯುತ್ತದೆ. ಆಹಾರವು ನಮ್ಮ ಬೆಳವಣಿಗೆಗೆ, ವಿಕಾಸಕ್ಕೆ ಹಾಗೂ ಉತ್ತಮ ಆರೋಗ್ಯಕ್ಕೆ ಅಗತ್ಯವಾಗಿದೆ. ಹಾಗಾದರೆ ನಾವು ಸೇವಿಸುವ ಆಹಾರದಲ್ಲಿ ಏನಿದೆ? ನಮ್ಮ ಆಹಾರ ಹೇಗಿರಬೇಕು? ಇದರ ಬಗ್ಗೆ ಒಂದಷ್ಟು ಮಾಹಿತಿ ಈ ಘಟಕದಲ್ಲಿದೆ. ಓದಿ ಅರ್ಥೈಸಿಕೊ.

After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- recall the nutrients of food.
  ಆಹಾರದಲ್ಲಿನ ಪೋಷಕಾಂಶಗಳನ್ನು ಪುನರ್ ನೆನಪಿಸಿಕೊಳ್ಳುವೆ.
- know about the sources of food and availability of food.
  ಆಹಾರ ದೊರೆಯುವ ಮೂಲಗಳು ಹಾಗೂ ಆಹಾರ ಲಭ್ಯತೆಯ ಪರಿಚಯ ಮಾಡಿಕೊಳ್ಳುವೆ.
- recognize the diversity of food in different places by understanding the points that decide the food system.
  ಆಹಾರ ಪದ್ಧತಿಯನ್ನು ನಿರ್ಧರಿಸುವ ಅಂಶಗಳನ್ನು ತಿಳಿದು ವಿವಿಧ ಪ್ರದೇಶಗಳ ಆಹಾರ ವೈವಿಧ್ಯತೆಯನ್ನು ಗುರುತಿಸುವೆ.
- understand the changing food habits and its effects on health.
  ಬದಲಾಗುತ್ತಿರುವ ಆಹಾರದ ಅಭ್ಯಾಸಗಳು ಹಾಗೂ ಅದರಿಂದ ಆರೋಗ್ಯದ ಮೇಲಾಗುವ ಪರಿಣಾಮಗಳನ್ನು ತಿಳಿಯುವೆ.
- understand the term food wastage and the methods to preserve it.
  ಆಹಾರದ ಪೋಲಾಗುವಿಕೆ ಹಾಗೂ ಅದರ ಸಂರಕ್ಷಣಾ ಕ್ರಮಗಳನ್ನು ತಿಳಿಯುವೆ.

© KTBS NOT TO BE REPUBLISHED

You already know that there are many nutrients in the food that we eat. The nutrients of food and the food materials which are rich in those nutrients are given below. Match the statements that suit the nutrients correctly.

ನಾವು ಸೇವಿಸುವ ಆಹಾರದಲ್ಲಿ ಅನೇಕ ಪೋಷಕಾಂಶಗಳಿವೆ ಎಂದು ನೀನೀಗಾಗಲೆ ತಿಳಿದಿರುವೆ. ಆಹಾರದ ಪೋಷಕಾಂಶಗಳು ಹಾಗೂ ಆ ಪೋಷಕಾಂಶಗಳು ಹೆಚ್ಚು ಪ್ರಮಾಣದಲ್ಲಿ

ಇರುವ ಆಹಾರ ಪದಾರ್ಥಗಳನ್ನು ಕೆಳಗೆ ನೀಡಲಾಗಿದೆ. ಪೋಷಕಾಂಶಗಳಿಗೆ ಹೊಂದುವ ಸರಿಯಾದ ಹೇಳಿಕೆಯನ್ನು ಜೋಡಿಸು.

Nutrients **ಪೋಷಕಾಂಶ**	**Food materials** **ಆಹಾರ ಪದಾರ್ಥಗಳು**
carbohydrates ಕಾರ್ಬೋಹೈಡ್ರೇಟ್ಸ್	fenugreek (menthya), carrot, sprouted seeds, fish oil, green-yellow vegetables ಮೆಂತ್ಯ, ಕ್ಯಾರೆಟ್, ಮೊಳಕೆಕಾಳು, ಮೀನೆಣ್ಣೆ, ಹಸಿರು–ಹಳದಿ ತರಕಾರಿಗಳು
lipid ಲಿಪಿಡ್	ragi, wheat, jowar, foxtail millets, little millets, bread, honey. ರಾಗಿ, ಗೋಧಿ, ಜೋಳ, ನವಣೆ, ಸಾಮೆ, ಬ್ರೆಡ್, ಜೇನುತುಪ್ಪ
protein ಪ್ರೊಟೀನ್	groundnut, meat, fish, dry coconut, sesame, egg yolk. ಶೇಂಗಾ, ಮಾಂಸ, ಮೀನು, ಒಣಕೊಬ್ಬರಿ, ಎಳ್ಳು, ಮೊಟ್ಟೆಯ ಹಳದಿ ಭಾಗ
vitamin ವಿಟಮಿನ್	vegetables, fruits, lemon, cereals. ತರಕಾರಿ, ಹಣ್ಣುಗಳು, ನಿಂಬೆ, ಏಕದಳ ಧಾನ್ಯಗಳು
minerals ಖನಿಜ ಲವಣಗಳು	cucumber, watermelon, grapes, radish, Pumpkin, brinjal, cabbage, cauliflower ಸೌತೆಕಾಯಿ, ಕಲ್ಲಂಗಡಿ, ದ್ರಾಕ್ಷಿ, ಮೂಲಂಗಿ, ಕುಂಬಳಕಾಯಿ, ಬದನೆಕಾಯಿ, ಕೋಸು, ಹೂಕೋಸು
water ನೀರಿನಾಂಶ	cowbeans, redgram, black eyed beans, milk, greengram, soyabean ಅವರೇಕಾಯಿ, ತೊಗರಿ, ಅಲಸಂದೆ, ಹಾಲು, ಹೆಸರುಕಾಳು, ಸೋಯಾಬೀನ್

You have matched the nutrients and their suitable food materials. Haven't you? These nutrients are helpful for our growth, repair, body building and for being healthy.

© KTBS NOT TO BE REPUBLISHED

ಪೋಷಕಾಂಶಗಳು ಹಾಗೂ ಅವುಗಳ ಸರಿಯಾದ ಆಹಾರ ಪದಾರ್ಥಗಳನ್ನು ಜೋಡಿಸಿರುವೆಯಲ್ಲವೆ? ಈ ಪೋಷಕಾಂಶಗಳು ನಮ್ಮ ಬೆಳವಣಿಗೆಗೆ, ನಮ್ಮ ದೇಹದ ದುರಸ್ತಿಗೆ, ದೇಹ ನಿರ್ಮಾಣಕ್ಕೆ ಹಾಗೂ ನಾವು ಆರೋಗ್ಯದಿಂದ ಇರಲು ನೆರವಾಗುತ್ತವೆ.



Think : We can't maintain our health if we eat food containing the same nutrients everyday. Why?

ಪ್ರತಿದಿನ ಒಂದೇ ರೀತಿಯ ಪೋಷಕಾಂಶವುಳ್ಳ ಆಹಾರ ಸೇವನೆಯಿಂದ ನಾವು ಉತ್ತಮ ಆರೋಗ್ಯ ಹೊಂದಲು ಸಾಧ್ಯವಿಲ್ಲ. ಏಕೆ?

Observe the following food materials.

ಕೆಳಗಿನ ಆಹಾರ ಪದಾರ್ಥಗಳನ್ನು ಗಮನಿಸು.

Paddy, foxtail millets, meat, pearl millet, mango, cheese, ragi, ghee, egg, cauliflower, milk, fenugreek seeds, carrot, butter milk, radish.

ಅಕ್ಕಿ, ನವಣೆ, ಮಾಂಸ, ಸಜ್ಜೆ, ಮಾವು, ಗಿಣ್ಣು, ರಾಗಿ, ತುಪ್ಪ, ಮೊಟ್ಟೆ, ಹೂಕೋಸು, ಹಾಲು, ಮೆಂತ್ಯ, ಕ್ಯಾರೆಟ್, ಮಜ್ಜಿಗೆ, ಮೂಲಂಗಿ.

Do this : Classify the food materials given above and write them in the table given below.

ಮೇಲೆ ನೀಡಲಾದ ಆಹಾರ ಪದಾರ್ಥಗಳನ್ನು ಕೆಳಗೆ ನೀಡಲಾದ ಪಟ್ಟಿಯಲ್ಲಿ ವಿಂಗಡಿಸಿ ಬರೆ.

Food materials from plant source ಸಸ್ಯಮೂಲ ಆಹಾರ ಪದಾರ್ಥಗಳು	**Food materials from animal source** ಪ್ರಾಣಿಮೂಲ ಆಹಾರ ಪದಾರ್ಥಗಳು

© KTBS NOT TO BE REPUBLISHED

These materials are available for us from plant source and animal source.

ಈ ಪದಾರ್ಥಗಳು ನಮಗೆ ಸಸ್ಯ ಮೂಲದಿಂದ ಮತ್ತು ಪ್ರಾಣಿ ಮೂಲದಿಂದ ದೊರೆಯುತ್ತವೆ.

The food substances from plant source are classified as follows.

ಸಸ್ಯ ಮೂಲದ ಆಹಾರ ಪದಾರ್ಥಗಳನ್ನು ಕೆಳಗಿನಂತೆ ವಿಂಗಡಿಸಬಹುದು.

- cereals
  ಏಕದಳ ಧಾನ್ಯಗಳು
- pulses
  ದ್ವಿದಳ ಧಾನ್ಯಗಳು (ಬೇಳೆಕಾಳುಗಳು)
- oil seeds
  ಎಣ್ಣೆಬೀಜಗಳು
- vegetables
  ತರಕಾರಿಗಳು
- green leafy vegetables
  ಸೊಪ್ಪುಗಳು
- fruits
  ಹಣ್ಣುಗಳು

©KTBS NOT TO BE REPUBLISHED


The list of some food materials obtained from plant source is given. Observe.

ಸಸ್ಯ ಮೂಲದಿಂದ ಪಡೆಯಲಾಗುವ ಕೆಲವು ಆಹಾರ ಪದಾರ್ಥಗಳ ಪಟ್ಟಿಯನ್ನು ನೀಡಿದೆ. ಗಮನಿಸು.

mango ಮಾವು	brinjal ಬದನೆ	sesame ಎಳ್ಳು	green gram ಹೆಸರು	foxtail millets ನವಣೆ	amaranth (harive) ಹರಿವೆ
palak ಪಾಲಕ್	groundnut ಶೇಂಗಾ	lemon ನಿಂಬೆ	beetroot ಬೀಟ್‌ರೂಟ್	fenugreek seeds (menthya) ಮೆಂತ್ಯ	saf flower ಕುಸುಬೆ
sweet potato ಸಿಹಿಗೆಣಸು	redgram ತೊಗರಿ	jowar ಜೋಳ	black gram ಉದ್ದು	orange ಕಿತ್ತಳೆ	little millet ಸಾಮೆ

Write the food materials given above in the related petals of the plant source.

ಮೇಲಿನ ಈ ಆಹಾರ ಪದಾರ್ಥಗಳನ್ನು ಸಸ್ಯಮೂಲದ ಸಂಬಂಧಿಸಿದ ದಳಗಳಲ್ಲಿ ಬರೆ.



NOT TO BE REPUBLISHED © KTBS

Millets

ಸಿರಿಧಾನ್ಯಗಳು

The food we eat consists of more than one nutrient. Among them, plant source like foxtail millets, barnyard millets, kodo millets are the barn of nutrients. Our elders used to consume more of millets. Now-a-days the consumption of these cereals which are considered to be healthy, is reducing.

ನಾವು ಸೇವಿಸುವ ಆಹಾರದಲ್ಲಿ ಒಂದಕ್ಕಿಂತ ಹೆಚ್ಚು ಪೋಷಕಾಂಶಗಳಿರುತ್ತವೆ. ಅದರಲ್ಲೂ ಸಸ್ಯಮೂಲದ ನವಣೆ, ಊದಲು, ಆರ್ಕದಂತಹ ಸಿರಿಧಾನ್ಯಗಳಂತೂ ಪೋಷಕಾಂಶಗಳ

ಕಣಜವೆ ಆಗಿವೆ. ನಮ್ಮ ಹಿರಿಯರು ಸಿರಿಧಾನ್ಯಗಳನ್ನು ಹೆಚ್ಚು ಬಳಸುತ್ತಿದ್ದರು. ಆರೋಗ್ಯಕ್ಕೆ ಉತ್ತಮ ಎನಿಸಿರುವ ಇವುಗಳ ಉಪಯೋಗ ಇತ್ತೀಚೆಗೆ ಕಡಿಮೆಯಾಗುತ್ತಿದೆ.

Important millets.

ಪ್ರಮುಖ ಸಿರಿ ಧಾನ್ಯಗಳು



© KTBS NOT TO BE REPUBLISHED

Activity : List out the millets shown in the picture.
ಚಿತ್ರದಲ್ಲಿರುವ ಸಿರಿಧಾನ್ಯಗಳನ್ನು ಪಟ್ಟಿಮಾಡು.

_____ _____ _____ _____ _____

_____ _____ _____ _____

Uses of millets :

ಸಿರಿಧಾನ್ಯಗಳ ಉಪಯೋಗಗಳು :

- Millets can be grown using less water in less period of time.
  ಸಿರಿಧಾನ್ಯಗಳನ್ನು ಕಡಿಮೆ ನೀರನ್ನು ಬಳಸಿ ಕಡಿಮೆ ಅವಧಿಯಲ್ಲಿ ಬೆಳೆಯಬಹುದು.
- They grow easily in different environment and climatic condition.
  ಇವು ಬಹುತೇಕ ವಿವಿಧ ಪರಿಸರ, ವಾಯುಗುಣದಲ್ಲಿ ಸುಲಭವಾಗಿ ಬೆಳೆಯುತ್ತವೆ.

- These can be grown without using chemical fertilizers, pesticides and herbicides.

  ರಾಸಾಯನಿಕ ಗೊಬ್ಬರ, ಕೀಟನಾಶಕ ಮತ್ತು ಕಳೆನಾಶಕಗಳಿಲ್ಲದೆ ಇವುಗಳನ್ನು ಬೆಳೆಯಬಹುದು.
- These are called the friends of famine.

  ಇವುಗಳನ್ನು ಬರಗಾಲದ ಮಿತ್ರರು ಎನ್ನುತ್ತಾರೆ.
- These cereals have a lot of nutrients.

  ಇವು ಹೆಚ್ಚು ಪೋಷಕಾಂಶಗಳುಳ್ಳ ಧಾನ್ಯಗಳಾಗಿವೆ.



Think: Now a days doctors advise patients to consume millets. Why?

ಇತ್ತೀಚೆಗೆ ವೈದ್ಯರು ರೋಗಿಗಳಿಗೆ ಸಿರಿಧಾನ್ಯಗಳನ್ನು ಸೇವಿಸುವಂತೆ ಸಲಹೆ ನೀಡುತ್ತಿದ್ದಾರೆ. ಏಕೆ?

Availability of food : The fertility of agricultural land and climatic conditions differ from one place to another in our state. So all types of crops cannot be grown in all the places. Crops like jowar, ragi and paddy cannot be grown in all places.

ಆಹಾರದ ಲಭ್ಯತೆ : ನಮ್ಮ ರಾಜ್ಯದ ಕೃಷಿ ಭೂಮಿಯ ಫಲವತ್ತತೆ ಹಾಗೂ ವಾಯುಗುಣ ಸ್ಥಳದಿಂದ ಸ್ಥಳಕ್ಕೆ ಬೇರೆಯಾಗಿದೆ. ಹೀಗಾಗಿ ಎಲ್ಲ ಪ್ರದೇಶಗಳಲ್ಲಿ ಎಲ್ಲ ರೀತಿಯ ಬೆಳೆಗಳನ್ನು ಬೆಳೆಯಲಾಗದು. ಅದರಲ್ಲೂ ಜೋಳ, ರಾಗಿ, ಭತ್ತದಂತ ಆಹಾರ ಪದಾರ್ಥಗಳನ್ನು ಎಲ್ಲಾ ಕಡೆ ಬೆಳೆಯಲು ಸಾಧ್ಯವಿಲ್ಲ.



Think : Increasing population and decreasing agricultural land is the cause for decrease in the availability of food. How?

ಏರುತ್ತಿರುವ ಜನಸಂಖ್ಯೆ ಹಾಗೂ ಬೇಸಾಯದ ಭೂಮಿ ಕಡಿಮೆಯಾಗುತ್ತಿರುವುದು, ಆಹಾರದ ಲಭ್ಯತೆ ಕಡಿಮೆಯಾಗುತ್ತಿರುವುದಕ್ಕೆ ಕಾರಣವಾಗಿವೆ. ಹೇಗೆ?

The Government has taken steps to ensure availability of food for all the people.


ಜನರಿಗೆ ಆಹಾರವು ಲಭ್ಯವಾಗುವಂತಾಗಲು ಸರ್ಕಾರ ಕೆಲವು ಕ್ರಮಗಳನ್ನು ಕೈಗೊಂಡಿದೆ.

NOTES @KTBS NOT TO BE REPUBLISHED

Example :


ಉದಾಹರಣೆ :

1. Giving milk and mid-day meals to students in school.
   ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಹಾಲು ಹಾಗೂ ಮಧ್ಯಾಹ್ನದ ವೇಳೆಯಲ್ಲಿ ಬಿಸಿಯೂಟ ನೀಡಲಾಗುತ್ತಿದೆ.





2. Supplying food materials at nominal rates through fair price shops.
   ನ್ಯಾಯಬೆಲೆ ಅಂಗಡಿಗಳ ಮೂಲಕ ಕಡಿಮೆ ಬೆಲೆಯಲ್ಲಿ ಆಹಾರ ಪದಾರ್ಥಗಳನ್ನು ಪೂರೈಸಲಾಗುತ್ತಿದೆ.



3. Steps are taken to prevent unnecessary hoarding of food materials by the merchants.
   ವ್ಯಾಪಾರಿಗಳು ಅಗತ್ಯಕ್ಕಿಂತ ಹೆಚ್ಚು ಆಹಾರ ಪದಾರ್ಥಗಳನ್ನು ಸಂಗ್ರಹ ಮಾಡದಂತೆ ಕ್ರಮವಹಿಸಿದೆ.

4. Purchasing the food materials, grown by the farmers, storing them in proper godowns and distributing.
   ರೈತರು ಬೆಳೆದ ಆಹಾರ ಪದಾರ್ಥಗಳನ್ನು ಖರೀದಿಸಿ, ಗೋದಾಮುಗಳಲ್ಲಿ ಸಂಗ್ರಹಿಸಿ, ವಿತರಿಸಲಾಗುತ್ತಿದೆ.

© KTBS NOT TO BE REPUBLISHED



Think : What are the advantages of giving mid-day meals and milk in schools.
ಶಾಲೆಗಳಲ್ಲಿ ಮಧ್ಯಾಹ್ನ ಬಿಸಿಯೂಟ ಹಾಗೂ ಹಾಲು ನೀಡುತ್ತಿರುವುದರಿಂದ ಆಗುವ ಅನುಕೂಲಗಳೇನು?

As food materials are available, it is possible to prepare food for us. Make a list of the food, prepared at your home.

ಆಹಾರ ಪದಾರ್ಥಗಳು ಲಭ್ಯವಾಗುವುದರಿಂದ ನಮಗೆ ಆಹಾರ ತಯಾರಿಸಲು ಸಾಧ್ಯವಾಗುತ್ತಿದೆ. ನಿನ್ನ ಮನೆಯಲ್ಲಿ ತಯಾರಿಸುವ ಆಹಾರ ಪದಾರ್ಥಗಳು ಯಾವುವು ಎಂಬುದನ್ನು ಕೆಳಗೆ ಪಟ್ಟಿಮಾಡು.

1) _____

2) _____

3) _____

4) _____

Compare this list with that of your friends. Is you and your friends' list of food differ? Observe.

ಈ ಪಟ್ಟಿಯನ್ನು ನಿನ್ನ ಗೆಳೆಯರ ಪಟ್ಟಿಯೊಂದಿಗೆ ಹೋಲಿಸು. ನಿನ್ನ ಹಾಗೂ ನಿನ್ನ ಗೆಳೆಯ / ಗೆಳತಿಯ ಆಹಾರ ಪಟ್ಟಿಯು ಬೇರೆ ಬೇರೆಯಾಗಿದೆಯಾ? ಗಮನಿಸು.

Complete the following activity.
ಕೆಳಗಿನ ಚಟುವಟಿಕೆಯನ್ನು ಪೂರ್ಣಗೊಳಿಸು.

Your food / ನಿನ್ನ ಆಹಾರ

Season/ಕಾಲಗಳು	**Food you eat / ಸೇವಿಸುವ ಆಹಾರ**
Summer ಬೇಸಿಗೆ ಕಾಲ	
Rainy ಮಳೆಗಾಲ	
Winter ಚಳಿಗಾಲ	

@KTBS NOT TO BE REPUBLISHED

Neighbour's food / ನೆರೆಯವರ ಆಹಾರ

Neighbouring house ಅಕ್ಕ ಪಕ್ಕದ ಮನೆ	
The common food of your village or town ನಿಮ್ಮೂರಿನ ಸಾಮಾನ್ಯ ಆಹಾರ	
The common food of your district ನಿನ್ನ ಜಿಲ್ಲೆಯ ಸಾಮಾನ್ಯ ಆಹಾರ	

The common food of different places of Karnataka
(Get the help of the teacher)

ಕರ್ನಾಟಕದ ವಿವಿಧ ಪ್ರದೇಶಗಳ ಸಾಮಾನ್ಯ ಆಹಾರ
(ಶಿಕ್ಷಕರ ಸಹಾಯ ಪಡೆ)

North Karnataka ಉತ್ತರ ಕರ್ನಾಟಕ	
South Karnataka ದಕ್ಷಿಣ ಕರ್ನಾಟಕ	
Coastal Karnataka ಕರಾವಳಿ ಕರ್ನಾಟಕ	
Malnad ಮಲೆನಾಡು	

© KTBS NOT TO BE REPUBLISHED

Answer the following questions (use the chart shown above)
ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು. (ಮೇಲಿನ ಚಾರ್ಟ್ ಸಹಾಯ ಪಡೆ)

- Which food do you take mainly in summer?
  ಬೇಸಿಗೆ ಕಾಲದಲ್ಲಿ ನೀನು ಹೆಚ್ಚು ಸೇವಿಸುವ ಆಹಾರ ಯಾವುದು?

- Which food do you take commonly in winter?
  ಚಳಿಗಾಲದಲ್ಲಿ ನೀನು ಸೇವಿಸುವ ಸಾಮಾನ್ಯ ಆಹಾರ ಯಾವುದು?
- Which is the main food of your district?
  ನಿನ್ನ ಜಿಲ್ಲೆಯ ಮುಖ್ಯ ಆಹಾರ ಯಾವುದು?
- The food of different places in Karnataka are different. Discuss with your teacher and write the reasons.
  ಕರ್ನಾಟಕದ ವಿವಿಧ ಪ್ರದೇಶಗಳ ಆಹಾರ ಬೇರೆ ಬೇರೆಯಾಗಿದೆ. ಏಕೆ ಎಂಬುದನ್ನು ಶಿಕ್ಷಕರೊಂದಿಗೆ ಚರ್ಚಿಸಿ, ಅದರ ಕಾರಣಗಳನ್ನು ಬರೆ.

1) _____

2) _____

3) _____

You have answered the questions. Haven't you? Some statements that decide the food we take, are given. Observe.

ಪ್ರಶ್ನೆಗಳಿಗೆ ಉತ್ತರಿಸಿದೆಯಲ್ಲವೆ? ನಾವು ಸೇವಿಸುವ ಆಹಾರವನ್ನು ನಿರ್ಧರಿಸುವ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಗಮನಿಸು.

- Although we are of the same state, our food system is on the basis of the climate and the food materials which are available/grown in the region in which we live.
  ನಾವು ಒಂದೇ ರಾಜ್ಯದವರಾಗಿದ್ದರೂ, ನಾವು ವಾಸಿಸುವ ಪ್ರದೇಶದಲ್ಲಿ ದೊರೆಯುವ/ಬೆಳೆಯುವ ಆಹಾರ ಪದಾರ್ಥಗಳು ಹಾಗೂ ವಾಯುಗುಣಕ್ಕೆ ಅನುಗುಣವಾಗಿ ನಮ್ಮ ಆಹಾರ ಪದ್ಧತಿ ಇರುತ್ತದೆ.
- The food which we eat is decided by the tradition/beliefs of a particular family.
  ನಾವು ಸೇವಿಸುವ ಆಹಾರವು ಆಯಾ ಕುಟುಂಬದ ಸಂಪ್ರದಾಯ/ನಂಬಿಕೆಗಳಿಂದ ನಿರ್ಧರಿತವಾಗುತ್ತದೆ.

©KTBS NOT TO BE REPUBLISHED

- Our food changes according to the seasons like summer, rainy and winter.


  ಬೇಸಿಗೆ, ಮಳೆ ಹಾಗೂ ಚಳಿಗಾಲಕ್ಕೆ ತಕ್ಕಂತೆ ನಮ್ಮ ಆಹಾರ ಬದಲಾಗುತ್ತದೆ.


Although all these aspects influence our food, now a days our food habits are becoming similar. Observe the following pictures.

ನಮ್ಮ ಆಹಾರದ ಮೇಲೆ ಇವುಗಳ ಪ್ರಭಾವವಿದ್ದರೂ ಇತ್ತೀಚೆಗೆ ನಮ್ಮ ಆಹಾರ ಅಭ್ಯಾಸಗಳು ಒಂದೇ ರೀತಿಯಾಗುತ್ತಿವೆ. ಈ ಕೆಳಗಿನ ಚಿತ್ರಗಳನ್ನು ಗಮನಿಸು.









The above factors are responsible for the change in our food habits.

ನಮ್ಮ ಆಹಾರದ ಅಭ್ಯಾಸಗಳು ಬದಲಾಗಲು ಮೇಲಿನ ಅಂಶಗಳು ಕಾರಣವಾಗಿವೆ.

They can be described as follows

ಅವುಗಳನ್ನು ಈ ರೀತಿ ಹೇಳಬಹುದು.

- Magazines, advertisement.
  ಪತ್ರಿಕೆಗಳು, ಜಾಹೀರಾತುಗಳು.
- Cooking related programmes telecasted in TV channels and radio.
  ಟಿ.ವಿ ರೇಡಿಯೋ ಚಾನಲ್‌ಗಳಲ್ಲಿ ಪ್ರಸಾರವಾಗುವ ಅಡುಗೆ ಸಂಬಂಧಿತ ಕಾರ್ಯಕ್ರಮಗಳು.
- The new food habits have become common, due to the use of internet in mobile phones and computers.
  ಮೊಬೈಲ್, ಕಂಪ್ಯೂಟರ್‌ಗಳಲ್ಲಿನ ಇಂಟರ್‌ನೆಟ್ ಬಳಕೆಯಿಂದಾಗಿ ಹೊಸ ಆಹಾರ ಅಭ್ಯಾಸಗಳು ಸಾಮಾನ್ಯವಾಗಿವೆ.
- Cookery book
  ಅಡುಗೆ ಪುಸ್ತಕ

Due to the influence of all these factors, our food habits have changed as follows.

ಇವೆಲ್ಲವುಗಳ ಪ್ರಭಾವದಿಂದಾಗಿ ನಮ್ಮ ಆಹಾರದ ಅಭ್ಯಾಸಗಳು ಕೆಳಗಿನಂತೆ ಬದಲಾಗಿವೆ.

- Consumption of food items like pizza, burger, sauce, samosa, corn-flakes, soup, noodles, ice cream, chocolate, chips have increased, instead of consuming nutritious home made food. Some of them are considered junk food.

  ಉತ್ತಮ ಪೋಷಕಾಂಶವುಳ್ಳ ಮನೆ ಊಟದ ಬದಲಿಗೆ ಪಿಜ್ಜಾ, ಬರ್ಗರ್, ಸಾಸ್, ಸಮೋಸಾ, ಕಾರ್ನ್‌ಫ್ಲೇಕ್, ಸೂಪ್, ನೂಡಲ್ಸ್, ಐಸ್‌ಕ್ರೀಂ, ಚಾಕ್‌ಲೇಟ್, ಚಿಪ್ಸ್‌ನಂತಹ ಆಹಾರ ಪದಾರ್ಥಗಳ ಸೇವನೆ ಹೆಚ್ಚಾಗುತ್ತಿದೆ. ಇವುಗಳಲ್ಲಿ ಕೆಲವನ್ನು ಜಂಕ್‌ಫುಡ್ ಎಂದು ಪರಿಗಣಿಸಲಾಗಿದೆ.



Know this : Junk food means the food material which has less nutritional value or is unnecessary from the health point of view.

ಜಂಕ್‌ಫುಡ್ ಎಂದರೆ ಆರೋಗ್ಯಕ್ಕೆ ಅನಗತ್ಯವಾದ ಅಥವಾ ಕಡಿಮೆ ಪೌಷ್ಟಿಕಾಂಶ ಹೊಂದಿರುವ ಆಹಾರ ಪದಾರ್ಥ.

© KTBS NOT TO BE REPUBLISHED



Think : Junk food is not good for health. Why?
ಜಂಕ್ ಫುಡ್ ಆರೋಗ್ಯಕ್ಕೆ ಒಳ್ಳೆಯದಲ್ಲ. ಏಕೆ?

- Consuming sauce rich food items like gobi manchurian, pani puri,chinese food has become common. The sauce contains certain chemicals which make food tastier.

  ಆಹಾರ ಹೆಚ್ಚು ರುಚಿಕರವಾಗಿರಲು ರಾಸಾಯನಿಕ ಅಂಶವಿರುವ ಸಾಸ್ ಬಳಸಿ ಮಾಡುವ ಗೋಬಿ ಮಂಚೂರಿ, ಪಾನಿಪೂರಿ, ಚೈನಿಸ್ ಫುಡ್‌ಗಳ ಬಳಕೆ ಸಾಮಾನ್ಯವಾಗುತ್ತಿದೆ.

- Consuming the outside food instead of home made food is on the increase today.

  ಮನೆಯಲ್ಲಿ ತಯಾರಿಸಿದ ಆಹಾರದ ಬದಲು ಹೊರಗಿನ ಆಹಾರವನ್ನು ಸೇವಿಸುವುದು ಇಂದು ಹೆಚ್ಚುತ್ತಿದೆ.

- Use of readymade food is increasing in the mechanical life of city/town.

  ನಗರ/ಪಟ್ಟಣಗಳ ಯಾಂತ್ರಿಕ ಜೀವನದಲ್ಲಿ ಸಿದ್ಧಪಡಿಸಿದ ಆಹಾರ ಪದಾರ್ಥಗಳ ಬಳಕೆ ಹೆಚ್ಚಾಗುತ್ತಿದೆ.

- Eating fast food, is an example for this.
  ಫಾಸ್ಟ್‌ಫುಡ್ ಸೇವನೆ ಇದಕ್ಕೊಂದು ಉದಾಹರಣೆ.



Think : What is fast food?
ಫಾಸ್ಟ್ ಫುಡ್ ಎಂದರೇನು?

©KTBS NOT TO BE REPUBLISHED

The effects of change in food habits:
ಬದಲಾದ ಆಹಾರ ಅಭ್ಯಾಸದ ಪರಿಣಾಮಗಳು :

- People fall sick easily.
  ಜನರು ಬಹಳ ಬೇಗ ರೋಗಗಳಿಗೆ ತುತ್ತಾಗುತ್ತಿದ್ದಾರೆ.

- Poisonous chemicals enter the body due to the consumption of more tasty food than of healthy food.
  ಆರೋಗ್ಯಕರ ಆಹಾರಕ್ಕಿಂತ, ರುಚಿಕರ ಆಹಾರ ಸೇವನೆ ಹೆಚ್ಚಾಗಿರುವುದರಿಂದ ದೇಹಕ್ಕೆ ವಿಷಯುಕ್ತ ರಾಸಾಯನಿಕಗಳು ಸೇರುತ್ತಿವೆ.

- Body is losing the power to fight diseases.
  ದೇಹವು ರೋಗಗಳ ವಿರುದ್ಧ ಹೋರಾಡುವ ಶಕ್ತಿ ಕಳೆದುಕೊಳ್ಳುತ್ತಿದೆ.
- Consumption of spicy food and junk food has given rise to obesity problems.
  ಮಸಾಲೆಯುಕ್ತ ಆಹಾರ, ಜಂಕ್ ಫುಡ್‌ಗಳಿಂದಾಗಿ ಬೊಜ್ಜು ಸಮಸ್ಯೆ ಉಂಟಾಗಿದೆ.

Activity : Which type of food should we eat? Discuss with your friends about this.

ನಾವು ಎಂತಹ ಆಹಾರವನ್ನು ಸೇವಿಸಬೇಕು? ಎಂಬುದರ ಬಗ್ಗೆ ಗೆಳೆಯ/ಗೆಳೆತಿಯರೊಂದಿಗೆ ಚರ್ಚಿಸು.

©KTBS NOT TO BE REPUBLISHED


Ready made food packets

ಸಿದ್ಧಪಡಿಸಿದ ಆಹಾರದ ಪೊಟ್ಟಣಗಳು

Now-a-days, food we eat is now available more in packets. While buying them observe the following points.


ಇಂದು ಮಾರುಕಟ್ಟೆಯಲ್ಲಿ ನಾವು ಸೇವಿಸುವ ಆಹಾರವು ಪೊಟ್ಟಣಗಳಲ್ಲಿ ಹೆಚ್ಚಾಗಿ ಸಿಗುತ್ತದೆ. ಇವುಗಳನ್ನು ಕೊಳ್ಳುವಾಗ ಕೆಳಗಿನ ಅಂಶಗಳನ್ನು ಗಮನಿಸು.

- Date of manufacture and expiry date.
  ತಯಾರಾದ ದಿನಾಂಕ, ಅವಧಿ ಮುಗಿಯುವ ದಿನಾಂಕ.
- The ingredients added to the stuffs/ quantity of chemicals.
  ಆಹಾರ ಪದಾರ್ಥಗಳಿಗೆ ಸೇರಿಸಿದ ಇತರೆ ಪದಾರ್ಥಗಳು (ಇನ್‌ಗ್ರೇಡಿಯೆಂಟ್ಸ್) / ರಾಸಾಯನಿಕ ಪ್ರಮಾಣ.
- Temperature needed to preserve the packet.
  ಆ ಪೊಟ್ಟಣವನ್ನು ಸಂರಕ್ಷಿಸಲು ಬೇಕಾದ ಉಷ್ಣತೆ.



Activity : Take a packet of food stuff and list out the points mentioned above.

ಆಹಾರ ಪದಾರ್ಥದ ಪೊಟ್ಟಣ ತೆಗೆದುಕೊಂಡು ಅದರಲ್ಲಿ ಮೇಲೆ ಹೇಳಿದ ಅಂಶಗಳನ್ನು ಪಟ್ಟಿ ಮಾಡು.





Think : It is dangerous to eat food stuffs which have expired or consist of a lot of added chemicals. How?

ಅವಧಿ ಮುಗಿದ ಅಥವಾ ಹೆಚ್ಚು ರಾಸಾಯನಿಕ ಸೇರಿಸಿದ ಆಹಾರ ಪದಾರ್ಥಗಳನ್ನು ಸೇವಿಸುವುದು ಅಪಾಯಕಾರಿ. ಹೇಗೆ?

@KTBS NOT TO BE REPUBLISHED

Wasting of food

ಆಹಾರ ಪೋಲು ಮಾಡುವಿಕೆ

We can see food being wasted here and there in these pictures. Throwing away food which is worth consuming is called **wasting of food**.

ನಾವು ಸೇವಿಸುವ ಆಹಾರವನ್ನು ಎಲ್ಲೆಂದರಲ್ಲಿ ಚೆಲ್ಲಿ ಪೋಲು ಮಾಡಿರುವುದನ್ನು ಈ ಚಿತ್ರಗಳಲ್ಲಿ ಕಾಣಬಹುದು. ಸೇವಿಸಲು ಯೋಗ್ಯವಾಗಿರುವ ಆಹಾರವನ್ನು ಸೇವಿಸದೇ ಎಲ್ಲೆಂದರಲ್ಲಿ ಚೆಲ್ಲುವುದನ್ನು **ಆಹಾರದ ಪೋಲಾಗುವಿಕೆ** ಎನ್ನುವರು.







Activity : Food is being wasted in many circumstances. With the help of your teacher, list out the situations and the reasons for which food is being wasted.

ಅನೇಕ ಸನ್ನಿವೇಶಗಳಲ್ಲಿ ಆಹಾರವು ಪೋಲಾಗುತ್ತಿದೆ. ಹೀಗೆ ಆಹಾರ ಪೋಲಾಗುವ ಸನ್ನಿವೇಶಗಳು ಹಾಗೂ ಕಾರಣಗಳನ್ನು ಶಿಕ್ಷಕರ ನೆರವಿನಿಂದ ಪಟ್ಟಿ ಮಾಡು.

_____

_____

_____

_____

_____

_____

NOT TO BE REPUBLISHED

It is important to preserve our food or food stuffs without wasting and spoiling them.

ನಮಗೆ ದೊರೆಯುವ ಆಹಾರ ಅಥವಾ ಆಹಾರ ಪದಾರ್ಥಗಳು ಪೋಲಾಗದಂತೆ ಹಾಗೂ ಕೆಡದಂತೆ ರಕ್ಷಿಸುವುದು ಮುಖ್ಯವಾಗಿದೆ.

Now a days food stuffs are preserved by following some methods. They are-

ಇತ್ತೀಚೆಗೆ ಕೆಲವು ವಿಧಾನಗಳನ್ನು ಅನುಸರಿಸಿ ಆಹಾರ ಪದಾರ್ಥಗಳನ್ನು ಕೆಡದಂತೆ ಸಂರಕ್ಷಿಸುತ್ತಾರೆ. ಅವುಗಳೆಂದರೆ –



- We know the taste of pickles. Salt is added to it in order to avoid spoiling for many days. Chemicals like sugar is used to preserve the fresh fruits.

  ಉಪ್ಪಿನಕಾಯಿಯ ರುಚಿ ನಮಗೆಲ್ಲ ಗೊತ್ತು. ಅದು ಬಹಳ ದಿನ ಕೆಡದಂತೆ ಇರಲು ಅದಕ್ಕೆ ಉಪ್ಪನ್ನು ಹಾಕಿರುತ್ತಾರೆ. ತಾಜಾ ಹಣ್ಣುಗಳನ್ನು ಸಂರಕ್ಷಿಸಲು, ಸಕ್ಕರೆಯಂತಹ ವಸ್ತುಗಳನ್ನು ಬಳಸಲಾಗುತ್ತದೆ.



- Grapes are dried and used as drygrapes.

  ದ್ರಾಕ್ಷಿಹಣ್ಣನ್ನು ಒಣಗಿಸಿ ಒಣದ್ರಾಕ್ಷಿಯಾಗಿ ಬಳಸುತ್ತಾರೆ.

Activity : List out the food stuff which are preserved by drying them.

ಒಣಗಿಸುವ ಮೂಲಕ ಸಂರಕ್ಷಿಸಲಾಗುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡು.

_____	_____
_____	_____
_____	_____
_____	_____
_____	_____

@KTBS NOT TO BE REPUBLISHED

- Fish, meat and milk are preserved by storing them at very low temperature. It is called **cold storage**.

  For example, Refrigerator (fridge).

  ಮೀನು, ಮಾಂಸ ಮತ್ತು ಹಾಲನ್ನು ಅತಿ ಕಡಿಮೆ ಉಷ್ಣತೆಯಲ್ಲಿ ಸಂಗ್ರಹಿಸಿ ರಕ್ಷಿಸುತ್ತಾರೆ. ಇದನ್ನು **ಶೀತಕ ಸಂಗ್ರಹಣೆ** ಎನ್ನುವರು.

  ಉದಾಹರಣೆಗೆ, ರೆಫ್ರೀಜರೇಟರ್(ಫ್ರಿಡ್ಜ್).

Good food keeps us healthy-physically and mentally. Food is the essence of our life. To be healthy, it is important to protect ourselves by eating good food.

ಉತ್ತಮ ಆಹಾರವು ನಮ್ಮನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯವಂತರನ್ನಾಗಿಸುತ್ತದೆ. ಆಹಾರವು ನಮ್ಮ ಜೀವಾಳ. ಉತ್ತಮ ಆಹಾರ ಸೇವನೆಯಿಂದ ನಮ್ಮನ್ನು ನಾವು ಸಂರಕ್ಷಿಸಿಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಅಗತ್ಯವಾಗಿದೆ.

@KTBS NOT TO BE REPUBLISHED

LESSON - 10

RESIDENCES

I2F5K6

You might have heard that **home is the first school and mother is the first teacher.** Home is a familiar term for us. Early man protected himself against sun light, rain, wind and wild animals by living in caves and bushes. Hence they are called the early shelters of mankind. Home became a need as man became civilized, settled at one place. Construction of houses were started by the civilized man as the need for a home increased in accordance with time & situation changes in society. Construction of residences started from independent houses and got transformed to community houses.

ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು ಎಂಬ ಗಾದೆ ಮಾತನ್ನು ಕೇಳಿರುತ್ತೀರಿ. ಮನೆ ನಮಗೆಲ್ಲ ಗೊತ್ತಿರುವ ಪದ. ಆದಿ ಮಾನವರು ಗುಹೆ ಮತ್ತು ಮರದ ಪೊಟರೆಗಳನ್ನು ಆಶ್ರಯಿಸಿ ಬಿಸಿಲು, ಮಳೆ, ಗಾಳಿ ಹಾಗೂ ಕಾಡು ಪ್ರಾಣಿಗಳಿಂದ ರಕ್ಷಣೆ ಪಡೆಯುತ್ತಿದ್ದರು. ಹಾಗಾಗಿ ಇವು ಮಾನವನ ಮೊದಲ ವಸತಿಗಳು ಎನಿಸಿದವು. ನಾಗರಿಕನಾದ ಮಾನವ ಒಂದೆಡೆ ನೆಲೆ ನಿಂತಾಗ ಮನೆಯ ಅವಶ್ಯಕತೆ ಹೆಚ್ಚಾಯಿತು. ನಾಗರಿಕ ಮಾನವನಿಂದ ಆರಂಭಗೊಂಡ ವಸತಿ ನಿರ್ಮಾಣವು ಕಾಲ, ಸಮಯ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಬದಲಾವಣೆಯಿಂದ ವಸತಿಯ ಅಗತ್ಯತೆ ಹೆಚ್ಚುತ್ತಾ ಹೋಯಿತು. ವೈಯಕ್ತಿಕ ವಸತಿ ನಿರ್ಮಾಣದಿಂದ, ಆರಂಭಗೊಂಡ ಈ ಕಾರ್ಯ ಸಾಮೂಹಿಕ ವಸತಿಗಳಾಗಿ ಬದಲಾಗಿ ಹೊಸ ರೂಪ ಪಡೆಯಿತು.

© DKTRS NOT TO BE REPUBLISHED

After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- know about personal and community housing projects.
  ಸಾಮೂಹಿಕ ಹಾಗೂ ವೈಯಕ್ತಿಕ ವಸತಿ ಯೋಜನೆಗಳ ಬಗ್ಗೆ ತಿಳಿಯುವೆ.
- understand the problems related to rural and urban residences.
  ಗ್ರಾಮೀಣ ಹಾಗೂ ನಗರಗಳ ವಸತಿ ಸಮಸ್ಯೆಗಳನ್ನು ಅರ್ಥೈಸಿಕೊಳ್ಳುವೆ.

Look at the pictures given below. You have learnt about the construction of these houses in the previous class. Write the materials required to build the houses given in the picture in the space provided.

ಕೆಳಗಿನ ಚಿತ್ರಗಳನ್ನು ಗಮನಿಸು. ಈ ಮನೆಗಳ ನಿರ್ಮಾಣದ ಬಗ್ಗೆ ಹಿಂದಿನ ತರಗತಿಯಲ್ಲಿ ತಿಳಿದಿರುವೆ. ಆಯಾ ಚಿತ್ರಗಳ ಮುಂದೆ ಮನೆ ನಿರ್ಮಾಣ ಮಾಡಲು ಬೇಕಾದ ಸಾಮಗ್ರಿಗಳನ್ನು ಬರೆ.

Type of house ಮನೆಯ ವಿಧ	**Building materials required** ಮನೆ ಕಟ್ಟಲು ಬೇಕಾದ ಸಾಮಗ್ರಿಗಳು
	_____ _____ _____
	_____ _____ _____
	_____ _____ _____

© KSTBS NOT TO BE REPUBLISHED

People live in various types of houses such as hut, house with tiled roof and houses with concrete terrace. Many families in villages or towns are living in houses constructed side by side in a locality. These are called **residences.**

ಗುಡಿಸಲು, ಹೆಂಚಿನ ಮನೆ ಮತ್ತು ಕಾಂಕ್ರೀಟ್ ತಾರಸಿ ಇರುವ ವಿವಿಧ ರೀತಿಯ ಮನೆಗಳಲ್ಲಿ ಜನರು ವಾಸಿಸುತ್ತಾರೆ. ಹಳ್ಳಿ ಅಥವಾ ನಗರಗಳಲ್ಲಿ ಅನೇಕ ಕುಟುಂಬಗಳು ಅಕ್ಕ–ಪಕ್ಕದಲ್ಲಿ ಮನೆಗಳನ್ನು ಕಟ್ಟಿಕೊಂಡು ಒಂದೆಡೆ ವಾಸಿಸುತ್ತಾರೆ. ಇದನ್ನು **ಜನವಸತಿಗಳು** ಎನ್ನುವರು.

Do this : Observe the lanes of your village or town. These are the areas of common residences. Generally families lead their life by constructing their own personal houses. The common features found in residences are given below. Write down the other points that you have observed.

ನಿನ್ನ ಹಳ್ಳಿಯ ಓಣಿ ಅಥವ ನಗರದ ಬೀದಿಗಳನ್ನು ನೀನು ಗಮನಿಸು. ಇವು ಸಾಮಾನ್ಯ ಜನವಸತಿ ಪ್ರದೇಶಗಳು. ಇಲ್ಲಿ ಸಾಮಾನ್ಯವಾಗಿ ಕುಟುಂಬಗಳು ವೈಯಕ್ತಿಕ ವಸತಿ ನಿರ್ಮಾಣ ಮಾಡಿಕೊಂಡು ಜೀವನ ನಡೆಸುತ್ತಿರುತ್ತಾರೆ. ಈ ಜನವಸತಿ ಪ್ರದೇಶಗಳಲ್ಲಿ ಕಂಡು ಬರುವ ಸಾಮಾನ್ಯ ಅಂಶಗಳನ್ನು ಕೆಳಗೆ ನೀಡಿದೆ. ನೀನು ಗಮನಿಸಿದ ಇತರೆ ಅಂಶಗಳನ್ನು ನಿಗದಿ ಪಡಿಸಿದ ಜಾಗದಲ್ಲಿ ಬರೆ.

- Houses built here and there or houses in a lane.
  ಮನೆಗಳು ಎಲ್ಲೆಂದರಲ್ಲಿ ಅಥವಾ ಸಾಲಾಗಿ ಕಂಡುಬರುತ್ತವೆ.
- Lanes are mostly zig zag.
  ಬೀದಿಗಳು ಬಹಳಷ್ಟು ಅಂಕು ಡೊಂಕಾಗಿರುತ್ತವೆ.
- Street lights are there in the residential areas.
  ಜನವಸತಿ ಪ್ರದೇಶದಲ್ಲಿ ಬೀದಿ ದೀಪದ ವ್ಯವಸ್ಥೆ ಮಾಡಲಾಗಿರುತ್ತದೆ.
- _____
- _____
- _____

NOT TO BE REPUBLISHED © KSEEB

Facilities are rarely available in areas where people build their own houses. Now-a-days community housing projects have started to meet the needs and demands of the people due to over population. Following pictures are the examples of community housing.

ಜನರು ಸ್ವತ: ತಾವೇ ನಿರ್ಮಿಸಿಕೊಂಡ ಈ ಜನವಸತಿ ಪ್ರದೇಶಗಳಲ್ಲಿ ಅವರಿಗೆ ಬೇಕಾದ ಎಲ್ಲ ಸೌಲಭ್ಯಗಳು ದೊರೆಯುವುದು ಅಪರೂಪ. ಹೆಚ್ಚಿದ ಜನಸಂಖ್ಯೆ, ಜನರ ಅಗತ್ಯತೆ ಮತ್ತು ಬೇಡಿಕೆಗೆ ಅನುಗುಣವಾಗಿ ಇತ್ತೀಚೆಗೆ ಸಾಮೂಹಿಕ ವಸತಿ ಯೋಜನೆಗಳನ್ನು ಆರಂಭಿಸಲಾಗಿದೆ. ಕೆಳಗಿನ ಚಿತ್ರಗಳು ಸಾಮೂಹಿಕ ವಸತಿಗಳಿಗೆ ಉದಾಹರಣೆಗಳಾಗಿವೆ.





Community houses are constructed for various advantages. Some statements are given below. But some of them are not the correct reasons. Put (✓) mark only for correct reasons.

ಹಲವು ಅನುಕೂಲಗಳಿಗಾಗಿ ಸಾಮೂಹಿಕ ವಸತಿಗಳನ್ನು ನಿರ್ಮಾಣ ಮಾಡಲಾಗುತ್ತದೆ. ಕೆಳಗೆ ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಆದರೆ ಕೆಲವು ಹೇಳಿಕೆಗಳು ಸರಿಯಾದ ಕಾರಣವಾಗಿಲ್ಲ. ಸರಿಯಾದ ಕಾರಣಗಳಿಗೆ ಮಾತ್ರ (✓) ಗುರುತು ಹಾಕು.

- Many families live together in community houses.
  ಸಾಮೂಹಿಕ ವಸತಿಗಳಲ್ಲಿ ಹಲವು ಕುಟುಂಬಗಳು ಒಂದೆಡೆ ವಾಸಿಸುತ್ತವೆ. ☐
- The Government provides housing facilities for the poor families by constructing community houses in poor villages or cities.
  ಹಣದ ಸೌಲಭ್ಯ ಕಡಿಮೆ ಇರುವ ಹಳ್ಳಿ ಅಥವಾ ನಗರದ ಬಡ ಕುಟುಂಬಗಳಿಗೆ ಸರಕಾರವೇ ಸಾಮೂಹಿಕ ವಸತಿ ನಿರ್ಮಿಸಿ, ವಸತಿ ಸೌಲಭ್ಯ ಒದಗಿಸುತ್ತದೆ. ☐

NOT TO BE REPUBLISHED

- They are constructed to provide systematic basic facilities for a large population in limited space.
  ಕಡಿಮೆ ಭೂಮಿಯಲ್ಲಿ ಅತಿ ಹೆಚ್ಚಿನ ಜನಸಂಖ್ಯೆಗೆ ವ್ಯವಸ್ಥಿತ ಮೂಲ ಸೌಲಭ್ಯಗಳನ್ನು ನೀಡಲು ಇವುಗಳನ್ನು ನಿರ್ಮಿಸಲಾಗುತ್ತದೆ. ☐
- Houses in multistoreyed buildings are constructed and are suitable for the residence of a single family only.
  ಬಹುಮಹಡಿ ವಸತಿ ಕಟ್ಟಡಗಳನ್ನು ಕೇವಲ ಒಂದೇ ಕುಟುಂಬ ವಾಸಿಸುವಂತೆ ನಿರ್ಮಾಣ ಮಾಡಲಾಗಿರುತ್ತದೆ. ☐

Objectives of community houses are –

ಸಾಮೂಹಿಕ ವಸತಿಗಳ ಮುಖ್ಯ ಉದ್ದೇಶಗಳೆಂದರೆ –

- To provide all the facilities to the houses which are required by individual families.
  ವೈಯಕ್ತಿಕ ಕುಟುಂಬಗಳಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಮನೆಗಳಲ್ಲಿ ನೀಡುವುದು.
- Providing good roads, transportation facilities, electrification, water supply and garbage disposals in a planned way for all houses.
  ಎಲ್ಲ ಮನೆಗಳಿಗೆ ಸಾರ್ವತ್ರಿಕವಾಗಿ ಬೇಕಾದ ಉತ್ತಮ ರಸ್ತೆ, ಸಂಚಾರ ವ್ಯವಸ್ಥೆ, ದೀಪ, ನೀರು, ಕಸ ವಿಲೇವಾರಿಗಳನ್ನು ಯೋಜನಾ ಬದ್ಧವಾಗಿ ಮಾಡಲಾಗುವುದು.
- Constructing parks, hospitals, etc., for public needs.
  ಸಾಮೂಹಿಕವಾಗಿ ಅವಶ್ಯವಿರುವ ಉದ್ಯಾನ, ಆಸ್ಪತ್ರೆ ಇತ್ಯಾದಿಗಳನ್ನು ನಿರ್ಮಿಸುವುದು.
- Connecting community houses to the regional main roads.
  ಸಾಮೂಹಿಕ ವಸತಿಯನ್ನು ಪ್ರಾದೇಶಿಕ ಮುಖ್ಯ ರಸ್ತೆಗೆ ಸೇರಿಸುವುದು.


Do this : Make groups of four students each. List out the facilities available in community houses. Take the help of your teacher.

ಗೆಳೆಯರ ಜೊತೆ ಗುಂಪು ಮಾಡಿಕೊ. ಪ್ರತಿಯೊಂದು ಗುಂಪಿನಲ್ಲಿ ನಾಲ್ಕು ವಿದ್ಯಾರ್ಥಿಗಳಿರಲಿ. ಸಾಮೂಹಿಕ ವಸತಿಗಳಲ್ಲಿ ಸಿಗುವ ಸೌಲಭ್ಯಗಳನ್ನು ಪಟ್ಟಿ ಮಾಡು. ಶಿಕ್ಷಕರ ನೆರವು ಪಡೆ.

©KTBS NOT TO BE REPUBLISHED

The facilities available in community houses are given in this chart. Observe.

ಈ ಕೆಳಗಿನ ಚಾರ್ಟ್‌ನಲ್ಲಿ ಸಾಮೂಹಿಕ ವಸತಿಗಳಲ್ಲಿ ಕಂಡುಬರುವ ಸೌಲಭ್ಯಗಳನ್ನು ಕೊಡಲಾಗಿದೆ. ಗಮನಿಸು.



© KTBS NOT TO BE REPUBLISHED

Activity : Is it possible to provide facilities available in community houses to the independent houses? Discuss with your friends.

ವೈಯಕ್ತಿಕ ವಸತಿಗಳಲ್ಲಿ ವಾಸಿಸುವ ಕುಟುಂಬಗಳಿಗೆ ಸಾಮೂಹಿಕ ವಸತಿಗಳಲ್ಲಿರುವಂತೆ ಸೌಲಭ್ಯಗಳನ್ನು ನಿರ್ಮಿಸಲು ಸಾಧ್ಯವೆ? ಗೆಳೆಯರ ಜೊತೆ ಚರ್ಚಿಸು.

Usually community housing projects are implemented in suitable places in villages and cities. The Government build community houses in villages. The Government has formed separate housing boards for the construction of houses in cities. Many problems arise during construction of houses in villages or cities.

ಸಾಮಾನ್ಯವಾಗಿ ಸಾಮೂಹಿಕ ವಸತಿ ಯೋಜನೆಗಳನ್ನು ಹಳ್ಳಿ ಹಾಗೂ ನಗರಗಳಲ್ಲಿ ಸೂಕ್ತವಾದ ಸ್ಥಳಗಳಲ್ಲಿ ನಿರ್ಮಾಣ ಮಾಡಲಾಗುತ್ತದೆ. ಹಳ್ಳಿಗಳಲ್ಲಿ ಸರ್ಕಾರಗಳು ಸಾಮೂಹಿಕ ವಸತಿಗಳನ್ನು ನಿರ್ಮಿಸುತ್ತದೆ. ನಗರಗಳಲ್ಲಿ ವಸತಿ ನಿರ್ಮಾಣಕ್ಕಾಗಿಯೇ ಪ್ರತ್ಯೇಕ ಮಂಡಳಿಗಳನ್ನು ಸರ್ಕಾರ ರಚನೆ ಮಾಡಿರುತ್ತದೆ. ನಗರ ಅಥವಾ ಹಳ್ಳಿಗಳಲ್ಲಿ ಜನವಸತಿಗಳನ್ನು ನಿರ್ಮಿಸುವಾಗ ಅನೇಕ ಸಮಸ್ಯೆಗಳು ಎದುರಾಗುತ್ತವೆ.







The above pictures reveal some problems of residential areas.

ಮೇಲಿನ ಚಿತ್ರಗಳು ವಸತಿ ಪ್ರದೇಶಗಳಲ್ಲಿನ ಕೆಲವು ಸಮಸ್ಯೆಗಳನ್ನು ಬಿಂಬಿಸುತ್ತವೆ.

Observe the following statements. Some residential problems of rural/urban areas are given. Write the rest after discussing with your friends (Take the help of your teacher)

ಕೆಳಗಿನ ಹೇಳಿಕೆಗಳನ್ನು ಗಮನಿಸು. ನಗರ / ಗ್ರಾಮೀಣ ಪ್ರದೇಶದ ವಸತಿ ಸಮಸ್ಯೆಗಳಲ್ಲಿ ಕೆಲವನ್ನು ನೀಡಿದೆ. ಉಳಿದವುಗಳನ್ನು ಗೆಳೆಯ/ಗೆಳತಿಯರೊಂದಿಗೆ ಚರ್ಚಿಸಿ ಬರೆ. (ಶಿಕ್ಷಕರ ನೆರವು ಪಡೆ)

Housing problems in urban areas.

ನಗರ ಪ್ರದೇಶದ ವಸತಿ ಸಮಸ್ಯೆಗಳು

* No proper underground drainage system.
  ಸಮರ್ಪಕ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ.
* Garbage disposal problems.
  ಕಸ/ತ್ಯಾಜ್ಯದ ವಿಲೇವಾರಿ ಸಮಸ್ಯೆ.
* Frequent fire accidents in multistoreyed buildings.
  ಬಹುಮಹಡಿ ವಸತಿ ಕಟ್ಟಡಗಳಲ್ಲಿ ಆಗಾಗ್ಗೆ ಸಂಭವಿಸುವ ಅಗ್ನಿ ದುರಂತಗಳು.
* _____
* _____

©KTBS NOT TO BE REPUBLISHED

Housing problems in rural areas

ಗ್ರಾಮೀಣ ಪ್ರದೇಶದ ವಸತಿ ಸಮಸ್ಯೆಗಳು

* No bathroom and toilet facility.
  ಸ್ನಾನ ಗೃಹ, ಶೌಚಾಲಯ ಇಲ್ಲದಿರುವಿಕೆ.
* No proper electrification.
  ವಿದ್ಯುತ್ ಸೌಲಭ್ಯ ಇಲ್ಲದಿರುವಿಕೆ.
* Lack of pure drinking water supply.
  ಶುದ್ಧ ಕುಡಿಯುವ ನೀರಿನ ಸರಬರಾಜು ಇಲ್ಲದಿರುವಿಕೆ.

* Streets are not suitable for the transportation of vehicles.
  ವಾಹನ ಸಂಚಾರಕ್ಕೆ ಸೂಕ್ತವಲ್ಲದ ಬೀದಿಗಳು.
* No underground drainage facilities.
  ಒಳ ಚರಂಡಿಯ ಸೌಲಭ್ಯ ಇಲ್ಲದಿರುವುದು.
* _____
* _____
* _____

Look at the list of urban and rural housing problems. A few facilities that the best city residence/village residence are given here. Observe.

ನಗರ ಹಾಗೂ ಗ್ರಾಮೀಣ ಪ್ರದೇಶದ ವಸತಿ ಸಮಸ್ಯೆಗಳ ಪಟ್ಟಿ ಗಮನಿಸು. ಒಂದು ಉತ್ತಮ ನಗರ ವಸತಿ/ ಹಳ್ಳಿ ವಸತಿಯು ಹೊಂದಿರಬೇಕಾದ ಕೆಲವು ಸೌಲಭ್ಯಗಳನ್ನು ನೀಡಿದೆ ಗಮನಿಸು.

© KTBS NOT TO BE REPUBLISHED

Housing features of the best city or village

ಉತ್ತಮ ನಗರ ಅಥವಾ ಹಳ್ಳಿಯ ವಸತಿಯ ಲಕ್ಷಣಗಳು

* Proper ventilation and light.
  ಗಾಳಿ, ಬೆಳಕು ಯಥೇಚ್ಛವಾಗಿ ಬರುವಂತಿರಬೇಕು.
* Rain water harvesting system from the roof of each house and its storage.
  ಪ್ರತಿ ಮನೆಯ ಮೇಲ್ಛಾವಣಿಯು ಮಳೆ ಕೊಯ್ಲು ಅನುಸರಿಸಿ ಮಳೆ ನೀರು ಸಂಗ್ರಹ ಮಾಡುವ ವ್ಯವಸ್ಥೆ ಇರುತ್ತದೆ.
* Electricity by solar energy.
  ಸೌರಶಕ್ತಿಯಿಂದ ವಿದ್ಯುತ್ ಪಡೆಯುವಿಕೆ.
* Closed underground drainage system.
  ಮುಚ್ಚಿದ ಒಳಚರಂಡಿ ವ್ಯವಸ್ಥೆ.

* Proper system for garbage disposal and preparation of manure from garbage.

  ಕಸವಿಲೇವಾರಿ ಮಾಡಲು ಸಮರ್ಪಕ ವ್ಯವಸ್ಥೆ ಇರುತ್ತದೆ. ಕಸದಿಂದ ಗೊಬ್ಬರ ತಯಾರಿಸುವ ವ್ಯವಸ್ಥೆ.

Over all, a good house can provide health, happiness, and peace for the family members and their neighbours. **Houses with the best facilities lead to good health**.

ಒಟ್ಟಾರೆ ಉತ್ತಮ ವಸತಿಯು ಅಲ್ಲಿ ವಾಸಿಸುವ ಕುಟುಂಬದ ಸದಸ್ಯರಿಗೆ ಹಾಗೂ ನೆರೆಯವರಿಗೆ ಆರೋಗ್ಯ, ಸಂತಸ ಮತ್ತು ನೆಮ್ಮದಿ ನೀಡಬಲ್ಲದು. **ಉತ್ತಮ ಸೌಲಭ್ಯವುಳ್ಳ ವಸತಿ ಉತ್ತಮ ಆರೋಗ್ಯಕ್ಕೆ ಸಹಕಾರಿ.**

@KTBS
NOT TO BE REPUBLISHED

LESSON - 11

NATURE OF MATTER



We see several materials (objects) in our daily life and use a few of them. These materials are also called **matter**. These materials are not just like one another. But if you observe keenly, the characteristics of some materials appear similar. Every one is eager to know, what are the constituents of these materials? What are the common characteristics of these materials?

ನಾವು ದಿನವೂ ಅನೇಕ ವಸ್ತುಗಳನ್ನು ನೋಡುತ್ತೇವೆ ಮತ್ತು ಕೆಲವನ್ನು ಬಳಸುತ್ತೇವೆ. ವಸ್ತುಗಳನ್ನು **ದ್ರವ್ಯ**ಗಳೆಂದೂ ಕರೆಯುತ್ತಾರೆ. ಒಂದು ವಸ್ತುವು ಇನ್ನೊಂದರಂತೆ ಇರುವುದಿಲ್ಲ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಕೆಲವು ವಸ್ತುಗಳ ಲಕ್ಷಣಗಳು ಒಂದೇ ಆಗಿರುತ್ತವೆ. ವಸ್ತುಗಳು ಯಾವುದರಿಂದಾಗಿವೆ? ಈ ವಸ್ತುಗಳ ಸಾಮಾನ್ಯ ಲಕ್ಷಣಗಳು ಏನು? ಎಂಬ ಕುತೂಹಲ ಎಲ್ಲರಿಗೂ ಇದೆ.

@KTBS NOT TO BE REPUBLISHED

After studying this lesson you,
ಈ ಪಾಠವನ್ನು ಕಲಿತ ನಂತರ ನೀನು,

- understand about matter.
  ದ್ರವ್ಯ (ವಸ್ತು)ದ ಬಗ್ಗೆ ಅರಿಯುವೆ.
- explain the characteristics of matter
  ದ್ರವ್ಯದ ಲಕ್ಷಣಗಳನ್ನು ವಿವರಿಸುವೆ.
- identify different states of matter
  ದ್ರವ್ಯದ ವಿವಿಧ ಸ್ಥಿತಿಗಳನ್ನು ಗುರುತಿಸುವೆ.
- understand the types of change in states of matter.
  ದ್ರವ್ಯದ ಸ್ಥಿತಿ ಬದಲಾವಣೆಯ ಬಗೆಗಳನ್ನು ಗ್ರಹಿಸುವೆ.
- understand about mass, density, pressure, sublimation and buoyancy.
  ರಾಶಿ, ಸಾಂದ್ರತೆ, ಒತ್ತಡ, ಉತ್ಪತನ ಮತ್ತು ಪ್ಲವನತೆ ಬಗ್ಗೆ ತಿಳಿಯುವೆ.


In our daily life, we see objects in different forms.

ನಮ್ಮ ದಿನನಿತ್ಯದ ಜೀವನದಲ್ಲಿ ಸುತ್ತಮುತ್ತ ವಿವಿಧ ರೂಪದಲ್ಲಿ ವಸ್ತುಗಳನ್ನು ಕಾಣುತ್ತೇವೆ.

Activity : Collect at least ten objects in your surroundings.

ನಿನ್ನ ಸುತ್ತಮುತ್ತ ಇರುವ ವಸ್ತುಗಳಲ್ಲಿ ಕನಿಷ್ಠ ಹತ್ತನ್ನಾದರೂ ಸಂಗ್ರಹಿಸು.





©KTBS NOT TO BE REPUBLISHED

Activity : List out the names of the materials you have collected by arranging them neatly.

ನೀನು ಸಂಗ್ರಹಿಸಿದ ವಸ್ತುಗಳನ್ನು ಒಂದೆಡೆ ಅಚ್ಚುಕಟ್ಟಾಗಿ ಜೋಡಿಸಿ ಆ ವಸ್ತುಗಳ ಹೆಸರನ್ನು ಪಟ್ಟಿ ಮಾಡು.

_____ _____ _____ _____ _____


_____ _____ _____ _____ _____

Observe whether the objects you have collected are as follows. If yes, put (✓) mark and if no, put (×) mark.

ನೀನು ಸಂಗ್ರಹಿಸಿದ ವಸ್ತುಗಳು ಕೆಳಗಿನಂತಿವೆಯೇ ಎಂದು ಗಮನಿಸಿ, (✓) ಅಥವಾ (X) ಎಂದು ಗುರುತಿಸು.

• Have you brought hard material? ಗಟ್ಟಿಯಾದ ವಸ್ತುಗಳನ್ನು ತಂದಿರುವೆಯಾ?	
• Is there any soft material? ಮೆದುವಾದ ವಸ್ತುವಿದೆಯೇ?	
• Is there any material which could be stored in a bottle or in vessels? ಬಾಟಲಿ ಅಥವಾ ಪಾತ್ರೆಗಳಲ್ಲಿ ಹಾಕಿಡುವ ವಸ್ತುವಿದೆಯಾ?	
• Is there any brittle material? ನೆಲಕ್ಕೆ ಬಿದ್ದರೆ ಪುಡಿಯಾಗುವ ವಸ್ತುವಿದೆಯಾ?	
• Is there any material which can be dissolved in water? ನೀರಿಗೆ ಹಾಕಿದರೆ ವಿಲೀನವಾಗುವ (ಕರಗುವ) ವಸ್ತುವಿದೆಯಾ?	
• Is there any material which turns into manure after mixing with the soil? ಮಣ್ಣಿಗೆ ಸೇರಿ ಕ್ರಮೇಣ ಮಣ್ಣಾಗುವ (ಗೊಬ್ಬರ) ವಸ್ತುವಿದೆಯಾ?	

© KTBS NOT TO BE REPUBLISHED



Activity : Observe the differences if any, by comparing the materials collected by you and your friend.

ನೀನು ಮತ್ತು ನಿನ್ನ ಗೆಳೆಯ ಸಂಗ್ರಹಿಸಿದ ವಸ್ತುಗಳನ್ನು ಹೋಲಿಸಿ ನೋಡು, ವ್ಯತ್ಯಾಸಗಳಿದ್ದರೆ ಗಮನಿಸು.

From the activity you have done, you can understand that materials are in different forms in their shape, colour, brightness, solubility, etc., Isn't it?

ನೀನು ಮಾಡಿದ ಚಟುವಟಿಕೆಯಿಂದ ವಸ್ತುಗಳು ಅವುಗಳ ಆಕಾರ, ಬಣ್ಣ, ಹೊಳಪು, ನೀರಿನಲ್ಲಿ ವಿಲೀನವಾಗುವ–ಹೀಗೆ ಅನೇಕ ರೂಪಗಳಲ್ಲಿವೆ ಎಂದು ತಿಳಿಯಬಹುದು. ಅಲ್ಲವೆ?

Matter (object)

ದ್ರವ್ಯ (ವಸ್ತು)




How are the materials available in nature created?

ಪರಿಸರದಲ್ಲಿ ಲಭ್ಯವಿರುವ ವಸ್ತುಗಳು ಹೇಗೆ ಉಂಟಾಗಿವೆ?

©KTBS NOT TO BE REPUBLISHED


Experiment : Take some chalk powder. Dip your finger in it and sprinkle slowly over a plane glass. Observe these minute pieces carefully through a convex lens.

ಸೀಮೆಸುಣ್ಣದ ಪುಡಿಯನ್ನು ತೆಗೆದುಕೊ. ಅದನ್ನು ಬೆರಳಿನಿಂದ ಮುಟ್ಟು. ನಿನ್ನ ಬೆರಳಿಗೆ ಅಂಟಿಕೊಂಡ ಸಣ್ಣ ಸಣ್ಣ ಚೂರುಗಳನ್ನು ಒಂದು ಗಾಜಿನ ಪಟ್ಟಿಯ ಮೇಲೆ ನಿಧಾನವಾಗಿ ಚಿಮುಕಿಸು. ಒಂದು ಪೀನ ಮಸೂರ (ಭೂತಕನ್ನಡಿ)ದ ಸಹಾಯದಿಂದ ಆ ಸಣ್ಣ ಸಣ್ಣ ಚೂರುಗಳನ್ನು ಸೂಕ್ಷ್ಮವಾಗಿ ಗಮನಿಸು.

Can these minute pieces be divided further? Think and try.

ಆ ಪ್ರತೀ ಸಣ್ಣ ಸಣ್ಣ ಚೂರುಗಳನ್ನು ಮತ್ತೆ ಪುಡಿ ಮಾಡಲು ಸಾಧ್ಯವೆ? ಆಲೋಚಿಸು ಪ್ರಯತ್ನಿಸು.



Is it not possible for us to divide them further?

ನಮ್ಮಿಂದ ಇದನ್ನು ಇನ್ನೂ ಚಿಕ್ಕದಾಗಿ ಮಾಡಲು ಸಾಧ್ಯವಿಲ್ಲವೇ?

We can observe that the finest pieces of chalk cannot be divided further, though we try to do so.

ನಾವು ಸೀಮೆ ಸುಣ್ಣದ ಪುಡಿಯನ್ನು ಎಷ್ಟೇ ಸಣ್ಣ ಸಣ್ಣ ಪುಡಿಮಾಡಿದರೂ ಕೊನೆಗೆ ಇನ್ನೂ ಚಿಕ್ಕದು ಮಾಡಲಾಗದ ಸಣ್ಣ ಚೂರುಗಳನ್ನು ಕಾಣುತ್ತೇವೆ.

©KTBS NOT TO BE REPUBLISHED

Scientifically materials are called matter. Matter is made up of small particles. The smallest piece of matter is called **particle**.

ವಸ್ತುವನ್ನು ವೈಜ್ಞಾನಿಕವಾಗಿ ದ್ರವ್ಯವೆಂದು ಕರೆಯಲಾಗುತ್ತದೆ. ದ್ರವ್ಯಗಳೆಲ್ಲವೂ ಅತ್ಯಂತ ಸಣ್ಣ ಕಣಗಳಿಂದಾಗಿವೆ. ದ್ರವ್ಯದ ಅತೀ ಸೂಕ್ಷ್ಮವಾದ ಚೂರನ್ನು **ಕಣ** ಎನ್ನುತ್ತೇವೆ.



Think : Read the instances given below and try to remember if you have experienced any.

ಇಲ್ಲಿ ತಿಳಿಸಿದ ವಸ್ತುಗಳೇನಾದರೂ ಅತಿ ಸೂಕ್ಷ್ಮ (ಚಿಕ್ಕ) ಆಕಾರದಲ್ಲಿ ನಿನ್ನ ಅನುಭವಕ್ಕೆ ಬಂದ ಘಟನೆಗಳು ಇವೆಯೆ?

- How did fragrant particles reach your nose from the opened scent bottle?

  ಸುವಾಸನೆಯ ಕಣಗಳು ಸುವಾಸನೆಯ ದ್ರವ್ಯದಿಂದ(ಸೆಂಟ್) ನಿನ್ನ ಮೂಗಿನವರೆಗೆ ಬಂದದ್ದಾದರೂ ಹೇಗೆ?

- How did your nose feel that a room in your house or courtyard is being swept. Though you are in a neighbouring room.
  ಮನೆಯಲ್ಲಿ ಕೋಣೆ ಇಲ್ಲವೆ ಅಂಗಳದ ಕಸ ಗುಡಿಸಿದಾಗ, ನೀನು ಪಕ್ಕದ ಕೋಣೆಯಲ್ಲಿದ್ದಾಗಲೂ ನಿನ್ನ ಮೂಗಿಗೆ ಸೇರಿದ ಅನುಭವ ಹೇಗಾಯಿತು?
- Did you notice any collection of dark particles on the roof or many place when fire wood is burnt or kerosene lamp is lit?
  ಸೌದೆ ಉರಿದಾಗ ಇಲ್ಲವೇ ಚಿಮಣಿ ದೀಪ ಉರಿಸಿದಾಗ ಅದರ ಕಪ್ಪಾದ ಕಣಗಳು ಛಾವಣಿ ಅಥವಾ ಇನ್ಯಾವುದೇ ಸ್ಥಳದಲ್ಲಿ ಸಂಗ್ರಹವಾಗುವಾಗ ನಿನ್ನ ಕಣ್ಣಿಗೆ ಏನಾದರೂ ಕಂಡಿತೆ?

Particles present in the matter are invisible. Matter is made up of very minute particles. Hence visible matter consists of invisible particles.

ದ್ರವ್ಯಗಳಲ್ಲಿರುವ ಕಣಗಳು ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿರುತ್ತವೆ. ದ್ರವ್ಯವು ಅತ್ಯಂತ ಸೂಕ್ಷ್ಮಕಣಗಳಿಂದಾಗಿದೆ. ಅಂದರೆ ಕಣ್ಣಿಗೆ ಕಾಣುವ ದ್ರವ್ಯವು ಕಣ್ಣಿಗೆ ಕಾಣದ (ಅಗೋಚರ) ಕಣಗಳಿಂದ ಕೂಡಿರುತ್ತದೆ.


- What do you mean by matter?
  ದ್ರವ್ಯ ಎಂದರೇನು?

_____

_____

Activity : Collect and paste the available pictures of matter in the following boxes.
ಲಭ್ಯವಾದ ಕೆಲವು ದ್ರವ್ಯಗಳ ಚಿತ್ರ ಸಂಗ್ರಹಿಸಿ ಕೆಳ ಕಾಣಿಸಿದ ಅಂಕಣದಲ್ಲಿ ಅಂಟಿಸು.

© KTBS NOT TO BE REPUBLISHED



Activity

- Take a material, make it into minute pieces.
  ಯಾವುದಾದರೊಂದು ದ್ರವ್ಯವನ್ನು ತೆಗೆದುಕೊಂಡು ಸಣ್ಣ ಸಣ್ಣ ಚೂರುಗಳಾಗಿ ಮಾಡು.
- Write the name of the matter which you have divided into minute pieces.
  ನೀನು ಅತಿ ಸಣ್ಣ ಚೂರುಗಳಾಗಿ ಮಾಡಿದ ದ್ರವ್ಯದ ಹೆಸರು ಬರೆ.
- Collect the powder of available matter and exhibit it in your class room.
  ನಿನಗೆ ಸಿಗಬಹುದಾದ ಕೆಲವು ದ್ರವ್ಯಗಳ ಪುಡಿಯನ್ನು ಸಂಗ್ರಹಿಸಿ, ತರಗತಿಯಲ್ಲಿ ಪ್ರದರ್ಶಿಸು.

@KTBS NOT TO BE REPUBLISHED

Properties of Matter

ದ್ರವ್ಯದ ಲಕ್ಷಣಗಳು

Matters have special properties. These properties can be understood with the help of some experiments and activities.

ದ್ರವ್ಯಗಳಿಗೆ ವಿಶಿಷ್ಟ ಲಕ್ಷಣಗಳಿವೆ. ಅವುಗಳನ್ನು ನಾವು ಪ್ರಯೋಗ ಮತ್ತು ಚಟುವಟಿಕೆಗಳ ಮೂಲಕ ತಿಳಿಯಬಹುದು.

1. Matter occupies space.

ದ್ರವ್ಯವು ಸ್ಥಳವನ್ನು ಆಕ್ರಮಿಸುತ್ತದೆ.

Activity : Pour the wheat flour or any other flour into a bowl, from a box. Again try to fill the bowl, so that the flour does not spill.

ಒಂದು ಸಣ್ಣ ಪಾತ್ರೆ ಇಲ್ಲವೆ ಬಟ್ಟಲಿಗೆ ಗೋಧಿಹಿಟ್ಟು ಅಥವಾ ಬೇರೆ ಯಾವುದೇ ಹುಡಿ ತುಂಬಿರುವ ಡಬ್ಬದಿಂದ ಬಟ್ಟಲು ಪೂರ್ತಿ ತುಂಬುವವರೆಗೆ ಹುಡಿಯನ್ನು ಸುರಿ, ಹುಡಿ ಕೆಳಗೆ ಚೆಲ್ಲದಂತೆ ಮತ್ತೆ ಮತ್ತೆ ಬಟ್ಟಲಿಗೆ ಸುರಿಯಲು ಪ್ರಯತ್ನಿಸು.



- Was it possible?
  ಸಾಧ್ಯವಾಯಿತೆ?
- Did you completely fill the bowl?
  ಬಟ್ಟಲ ಪೂರ್ತಿ ಹುಡಿ ತುಂಬಿತೆ?
- What should be done to pour some more flour into the bowl? Why?
  ಬಟ್ಟಲಲ್ಲಿ ಹೆಚ್ಚಿನ ಹುಡಿಯನ್ನು ತುಂಬಲು ಏನು ಮಾಡಬೇಕಾಯಿತು? ಏಕೆ?
- It was impossible to fill the bowl completely with the entire quantity of the flour present in the box Why?
  ಡಬ್ಬದಲ್ಲಿದ್ದ ಎಲ್ಲಾ ಹುಡಿಯನ್ನು ಬಟ್ಟಲಲ್ಲಿ ತುಂಬಲು ಸಾಧ್ಯವಾಗಲಿಲ್ಲ. ಏಕೆ?


_____

_____

_____

©KTBS NOT TO BE REPUBLISHED

Experiment : Put a glass beaker completely filled with water on a plate. Slowly immerse a stone of appropriate size tied with a thread into the beaker as shown in the picture.



ಗಾಜಿನ ಜಾಡಿಯೊಂದನ್ನು ತೆಗೆದುಕೊಂಡು ಅದರ ಕಂಠಪೂರ್ತಿ ನೀರು ತುಂಬಿ ತಟ್ಟೆಯ ಮೇಲಿಡು. ಜಾಡಿಯ ಗಾತ್ರಕ್ಕೆ ಮೀರದಂತೆ ಆರಿಸಿದ ಶುಭ್ರ ಕಲ್ಲೊಂದನ್ನು ನಿಧಾನವಾಗಿ ಚಿತ್ರದಲ್ಲಿ ಕಾಣಿಸಿದಂತೆ ಇಳಿಬಿಡು.

- What happened when the stone is immersed in the beaker?
  ಕಲ್ಲನ್ನು ಇಳಿಬಿಟ್ಟಾಗ ಜಾಡಿಯಲ್ಲಿರುವ ನೀರು ಏನಾಯಿತು?

_____



Why did water spill out?
ಜಾಡಿಯಿಂದ ನೀರೇಕೆ ಹೊರಚೆಲ್ಲಿತು?

- Why it is so? Think and explain to your friends.
  ಏಕಿರಬಹುದು ? ಎಂದು ಆಲೋಚಿಸಿ ಗೆಳೆಯರಿಗೆ ಹೇಳು.

Matter occupies space. A matter cannot occupy the place of another at a same time.

ದ್ರವ್ಯವು ಸ್ಥಳವನ್ನು ಆಕ್ರಮಿಸುತ್ತದೆ. ಒಂದು ದ್ರವ್ಯವು ಆಕ್ರಮಿಸಿರುವ ಸ್ಥಳವನ್ನು ಮತ್ತೊಂದು ದ್ರವ್ಯವು ಅಕ್ರಮಿಸಲು ಸಾಧ್ಯವಿಲ್ಲ.

- Write the names of some matter arround you.
  ನಿನ್ನ ಸುತ್ತಮುತ್ತ ಕಾಣಿಸಿಗುವ ಕೆಲವು ದ್ರವ್ಯಗಳ ಹೆಸರನ್ನು ಬರೆ.

_____ _____
_____ _____
_____ _____
_____ _____


© KTBS NOT TO BE REPUBLISHED

Air is a matter. Air occupies space in its container.
ವಾಯು ಒಂದು ದ್ರವ್ಯ. ವಾಯು ತಾನಿರುವ ಪಾತ್ರೆಯನ್ನು ಆಕ್ರಮಿಸುತ್ತದೆ.

Activity : Blow air into a balloon. Particles in the air are rarely distributed. So particles of one matter can be accommodated in another in which particles are rarely distributed.

ಒಂದು ಬಲೂನನ್ನು ಊದಿ ಗಾಳಿ ತುಂಬು. ವಾಯುವಿನಲ್ಲಿರುವ ಕಣಗಳು ವಿರಳವಾಗಿರುತ್ತವೆ. ವಿರಳ ಕಣಗಳಿರುವ ಒಂದು ದ್ರವ್ಯದಲ್ಲಿ ಮತ್ತೊಂದು ದ್ರವ್ಯದ ಕಣಗಳನ್ನು ಸೇರಿಸಬಹುದಾಗಿದೆ.

Activity : Add some sugar or salt into a beaker fully filled with water, without allowing water to spillout.



ಕಂಠಪೂರ್ತಿ ನೀರು ತುಂಬಿದ ಜಾಡಿಯಲ್ಲಿ ಒಂದು ಚಿಟಿಕೆ ಉಪ್ಪು ಅಥವಾ ಸಕ್ಕರೆಯ ಪುಡಿಯನ್ನು ನಿಧಾನವಾಗಿ ನೀರು ಹೊರಚೆಲ್ಲದಂತೆ ಹಾಕು.

- How is it possible? Discuss with your teacher.

  ಇದು ಹೇಗಾಯಿತು? ಶಿಕ್ಷಕರೊಂದಿಗೆ ಚರ್ಚಿಸು.



Think : What happens to the tube of a vehicle when it is filled with excess air? Why?

ವಾಹನ ಚಕ್ರದ ಟ್ಯೂಬ್‌ಗೆ ಹೆಚ್ಚು ವಾಯುವನ್ನು ತುಂಬಿದಾಗ ಟ್ಯೂಬ್ ಏನಾಗುತ್ತದೆ? ಏಕಿರಬಹುದು?

Matter is made up of various visible and invisible particles.
ದ್ರವ್ಯವು ಅನೇಕ ಗೋಚರ ಮತ್ತು ಅಗೋಚರ ಕಣಗಳಿಂದಾಗಿದೆ.

NOT TO BE REPUBLISHED @KSEEBS


2. Matter has mass.

ದ್ರವ್ಯಕ್ಕೆ ರಾಶಿ (ದ್ರವ್ಯರಾಶಿ) ಇದೆ.

Activity :


- Take a weighing balance and note down the position of its needle. Write here.

  ಒಂದು ತಕ್ಕಡಿಯನ್ನು ತೆಗೆದುಕೊ. ತಕ್ಕಡಿಯ ಸೂಚಕ ಮುಳ್ಳು ಹೇಗಿದೆ? ನೋಡಿ ಬರೆ.



- Put any material of 50 g in one pan and note down the position of the needle. Write here.

  ತಕ್ಕಡಿಯ ಒಂದು ತಟ್ಟೆಯಲ್ಲಿ ೫೦g ಭಾರವುಳ್ಳ ಒಂದು ದ್ರವ್ಯವನ್ನು ಇಡು. ಸೂಚಕ ಮುಳ್ಳು ಮತ್ತು ತಕ್ಕಡಿಯನ್ನು ಗಮನಿಸು. ಹೇಗೆ ಕಾಣುತ್ತಿದೆ ಎಂದು ಬರೆ.



Weigh different materials you have or those which are available in your classroom with your friends.

ನಿನ್ನಲ್ಲಿರುವ ದ್ರವ್ಯಗಳು ಇಲ್ಲವೆ ನಿನ್ನ ತರಗತಿಯಲ್ಲಿರುವ ಬೇರೆ ಬೇರೆ ದ್ರವ್ಯಗಳನ್ನು ಗೆಳೆಯರೊಂದಿಗೆ ಸೇರಿ ತೂಕ ಮಾಡಿ ನೋಡು.



Think

- Is there any matter without weight?

  ತೂಕವಿಲ್ಲದ ಯಾವುದಾದರೂ ದ್ರವ್ಯವಿದೆಯಾ?

- Place a matter in a pan of the balance. Observe.

  ತಕ್ಕಡಿಯ ಒಂದು ತಟ್ಟೆಯಲ್ಲಿ ಯಾವುದಾದರೊಂದು ದ್ರವ್ಯವನ್ನಿಡು.

© KSTBS NOT TO BE REPUBLISHED

- Is it possible to keep both the pans equal? Try.
  If not, why?
  ತಕ್ಕಡಿಯ ಎರಡೂ ತಟ್ಟೆಗಳನ್ನು ಸಮಾನವಾಗಿಡಲು ಸಾಧ್ಯವೇ? ಪ್ರಯತ್ನಿಸು.
  ಇಲ್ಲದಿದ್ದರೆ ಏಕೆ?

Activity : Try to lift a bag with 3kg rice and another same type of empty bag. Write your experience here.

3 kg ತೂಕವುಳ್ಳ ಅಕ್ಕಿಯ ಚೀಲವನ್ನು ಮತ್ತು ಖಾಲಿಯಾಗಿರುವ ಅದೇ ತೆರನಾದ ಚೀಲವನ್ನು ಮೇಲಕ್ಕೆ ಎತ್ತಲು ಪ್ರಯತ್ನಿಸು. ನಿನಗಾದ ಅನುಭವವನ್ನು ಇಲ್ಲಿ ಬರೆ.

_____

_____

Matter is a total sum of many particles. It has mass. Matter is made up of small particles. Total number of particles in a matter depends upon its weight. The material which occupies space and posseses mass is called **Matter**.

ದ್ರವ್ಯವು ಅನೇಕ ಕಣಗಳ ಮೊತ್ತ. ಅದು ರಾಶಿಯನ್ನು ಹೊಂದಿದೆ. ದ್ರವ್ಯವು ಸಣ್ಣ ಸಣ್ಣ ಕಣಗಳಿಂದಾಗಿದೆ. ದ್ರವ್ಯದಲ್ಲಿನ ಒಟ್ಟು ಕಣಗಳು ಆ ದ್ರವ್ಯದ ತೂಕವನ್ನು ಅವಲಂಬಿಸಿದೆ. ಯಾವ ವಸ್ತುವು ಸ್ಥಳವನ್ನು ಆಕ್ರಮಿಸುವುದೊ ಮತ್ತು ರಾಶಿಯನ್ನು ಹೊಂದಿದೆಯೋ ಅದನ್ನು **ದ್ರವ್ಯ** ಎನ್ನುವರು.

Activity : What are the properties of matter? Write here.
ದ್ರವ್ಯದ ಲಕ್ಷಣಗಳು ಯಾವುವು? ಇಲ್ಲಿ ಬರೆ.

_____

_____

_____

_____

© KTBS NOT TO BE REPUBLISHED

States of matter

ದ್ರವ್ಯದ ಸ್ಥಿತಿಗಳು

Depending upon the arrangement of the particles in a matter, different states of matter are recognized.

ಕಣಗಳ ಜೋಡಣೆಯನ್ನು ಆಧರಿಸಿ ದ್ರವ್ಯಗಳನ್ನು ಬೇರೆ ಬೇರೆ ಸ್ಥಿತಿಗಳಲ್ಲಿ ಗುರುತಿಸುತ್ತೇವೆ.

Activity : Fill up the following table using the clues.

ಸುಳಿವು ಬಳಸಿ ಕೆಳಗಿನ ಅಂಕಣ ತುಂಬು.

Required, To burn :	F			E	W			D
To drink :				W				R
To breathe :						A		

ಉರಿಯಲು ಬೇಕು	ಕ		ಗೆ
ಕುಡಿಯಲು ಬೇಕು			ರು
ಉಸಿರಾಡಲು ಬೇಕು		ವಾ	

@KTBS NOT TO BE REPUBLISHED

- **Fill up the names of the matter filled above in the following table.**

  ಮೇಲಿನ ಅಂಕಣದಲ್ಲಿ ತುಂಬಿದ ದ್ರವ್ಯಗಳ ಹೆಸರನ್ನು ಕೆಳಗಿನ ಪಟ್ಟಿಯಲ್ಲಿ ತುಂಬು.

Solid / ಘನ Hard material ಗಟ್ಟಿಯಾದ ವಸ್ತು	**Liquid** / ದ್ರವ which gets the shape of the container ಪಾತ್ರೆಯ ಆಕಾರ ಪಡೆಯುವ ವಸ್ತು	**Gas** / ಅನಿಲ which cannot be held/ is invisible/spreads/ can be experienced. ಹಿಡಿಯಲು ಸಿಗದ/ಕಾಣಿಸದ/ ಹರಡುವ/ಅನುಭವಕ್ಕೆ ಬರುವ ವಸ್ತು

Activity : **List out the materials that you know which are in the form of solid, liquid and gas.**

ನಿನಗೆ ತಿಳಿದಿರುವ ಘನ, ದ್ರವ, ಅನಿಲ ರೂಪದ ವಸ್ತುಗಳನ್ನು ಪಟ್ಟಿ ಮಾಡು.

Solid

ಘನ : _____ _____ _____ _____ _____

Liquid

ದ್ರವ : _____ _____ _____ _____ _____

Gas

ಅನಿಲ : _____ _____ _____ _____ _____

Think and group these materials in their particular column; buttermilk, candle, curd, kerosene, charcoal, honey, piece of brick, smoke.


ಕೆಳಗೆ ಹೆಸರಿಸಿದ ವಸ್ತುಗಳು ಯಾವ ಗುಂಪಿಗೆ ಸೇರಿದವು ಎಂದು ಆಲೋಚಿಸಿ ಬರೆ. ಮಜ್ಜಿಗೆ, ಮೇಣದ ಬತ್ತಿ, ಮೊಸರು, ಸೀಮೆಎಣ್ಣೆ, ಇದ್ದಲು, ಜೇನುತುಪ್ಪ, ಇಟ್ಟಿಗೆ ಚೂರು, ಹೊಗೆ.

Solid / ಘನ	**Liquid / ದ್ರವ**	**Gas / ಅನಿಲ**
_____	_____	_____
_____	_____	_____
_____	_____	_____

Matter is identified in its three forms - Solid, Liquid and Gas.


ದ್ರವ್ಯವನ್ನು **ಘನ, ದ್ರವ** ಮತ್ತು **ಅನಿಲ** – ಈ ಮೂರು ಸ್ಥಿತಿಯಲ್ಲಿ ಗುರುತಿಸುತ್ತೇವೆ.

- In solids, particles are densely and orderly arranged.
  Example : stone, iron etc.,
  ಘನ ವಸ್ತುವಿನಲ್ಲಿ ಕಣಗಳು ನಿರ್ದಿಷ್ಟವಾಗಿ ಮತ್ತು ಒತ್ತೊತ್ತಾಗಿ ಜೋಡಿಸಲ್ಪಟ್ಟಿರುತ್ತವೆ.
  ಉದಾಹರಣೆ: ಕಲ್ಲು, ಕಬ್ಬಿಣ ಇತ್ಯಾದಿ.




@KTBS NOT TO BE REPUBLISHED

- In liquids, the particles are loosely arranged when compared to solids.
  Example : water, milk etc.,
  ದ್ರವ ವಸ್ತುವಿನಲ್ಲಿ ಕಣಗಳು ಘನ ವಸ್ತು ವಿನಲ್ಲಿರುವ ಕಣಕ್ಕಿಂತ ಸ್ವಲ್ಪ ವಿರಳವಾಗಿರುತ್ತವೆ.
  ಉದಾಹರಣೆ: ನೀರು ಹಾಲು, ಇತ್ಯಾದಿ.




- In gases, the particles are sparsely arranged.
  Example : air, smoke etc.,
  ಅನಿಲ ವಸ್ತುವಿನಲ್ಲಿ ಕಣಗಳು ತುಂಬಾ ವಿರಳವಾಗಿರುತ್ತವೆ.
  ಉದಾಹರಣೆ: ವಾಯು, ಹೊಗೆ, ಇತ್ಯಾದಿ.





Think : Where have you found the presence of gas?
ನೀನು ಎಲ್ಲೆಲ್ಲಿ ಅನಿಲ ವಸ್ತುಗಳ ಇರುವಿಕೆಯನ್ನು ಕಂಡಿರುವೆ?

Activity : Let us conduct an experiment to know that the particles are loosely distributed in a liquid.
ಒಂದು ದ್ರವ ವಸ್ತುವಿನಲ್ಲಿ ಕಣಗಳು ಸ್ವಲ್ಪ ವಿರಳವಾಗಿರುತ್ತವೆ ಎಂಬುದನ್ನು ತಿಳಿಯಲು ಒಂದು ಪ್ರಯೋಗ ಮಾಡಿ ನೋಡೋಣ.



- Take a beaker completely filled to the brim with water. Drop three marbles into it. Now water spills out. Why? Think and write here.
  ಒಂದು ಬೀಕರಿನ ಕಂಠದವರೆಗೆ ನೀರು ತುಂಬು. ಆ ಬೀಕರಿಗೆ ಮೂರು ಗೋಲಿಗಳನ್ನು ಹಾಕು. ಈಗ ನೀರು ಹೊರ ಚೆಲ್ಲುವುದು. ಏಕೆ? ಆಲೋಚಿಸಿ ಬರೆ.

_____

_____


@KTBS NOT TO BE REPUBLISHED

- Take another beaker of the same size completely filled with water. Add some sugar powder of equal to weight of the three marbles. Did you find any difference in the water level? Observe and Write here.

  ಅದೇ ಗಾತ್ರದ ಬೀಕರಿನಲ್ಲಿ ಕಂಠಪೂರ್ತಿ ನೀರು ತುಂಬು. ಆಗ ಹಾಕಿದ ಗೋಲಿಯಷ್ಟೇ ಸಾಮಾನ್ಯ ತೂಕದ ಸಕ್ಕರೆ ಪುಡಿಯನ್ನು ನಿಧಾನವಾಗಿ ಬೀಕರಿನ ನೀರಿಗೆ ಸೇರಿಸು. ಬೀಕರಿನ ನೀರಿನ ಮಟ್ಟದಲ್ಲಿ ಏನಾದರು ಬದಲಾವಣೆ ಆಯಿತೆ? ನೋಡಿ ಬರೆ.

  _____

  _____



@KTBS NOT TO BE REPUBLISHED

Since sugar particles have combined with the water particles, water does not spill out.

ಸಕ್ಕರೆಯ ಪುಡಿಯು ನೀರಿನ ವಿರಳವಾದ ಕಣಗಳ ಮಧ್ಯದ ಸ್ಥಳದಲ್ಲಿ ಸೇರಿಕೊಂಡ ಕಾರಣ ನೀರು ಹೊರಚೆಲ್ಲಲಿಲ್ಲ.

Activity : Place a marble on a table, plate, beaker and so on. Did you find any difference in the shape and size of it?

ಒಂದು ಗೋಲಿಯನ್ನು ಮೇಜು, ತಟ್ಟೆ, ಬೀಕರ್–ಹೀಗೆ ಬೇರೆ ಕಡೆಗಳಲ್ಲಿ ಇಟ್ಟು ನೋಡು. ಆಕಾರ ಮತ್ತು ಗಾತ್ರದಲ್ಲಿ ವ್ಯತ್ಯಾಸವಾಯಿತೆ?

Shape and size of the solids in any place do not change.

ಘನ ವಸ್ತುವು ಯಾವುದೇ ಸ್ಥಳದಲ್ಲಿದ್ದರೂ ಅದರ ಆಕಾರ ಮತ್ತು ಗಾತ್ರ ಬದಲಾಗುವುದಿಲ್ಲ.

Activity : Pour water into a beaker, plate, polythene bag, etc., Do you find any difference in its shape?

ನೀರನ್ನು ಬೀಕರ್, ತಟ್ಟೆ, ಪ್ಲಾಸ್ಟಿಕ್ ಚೀಲ.. ಹೀಗೆ ಬೇರೆ ಬೇರೆ ಪಾತ್ರೆಗಳಲ್ಲಿ ಹಾಕಿ ನೋಡು. ದ್ರವದ ಆಕಾರದಲ್ಲಿ ವ್ಯತ್ಯಾಸವಾಯಿತೆ?

Liquid takes the shape of its container. But does not change in size.

ದ್ರವವು ತಾನಿರುವ ಪಾತ್ರೆಯ ಆಕಾರವನ್ನು ಪಡೆಯುತ್ತದೆ. ಆದರೆ ಗಾತ್ರದಲ್ಲಿ ಬದಲಾಗುವುದಿಲ್ಲ.

Activity : Light an incense stick and allow its smoke to spread inside a jar. What is the shape of the smoke now?


ಊದುಬತ್ತಿಯನ್ನು ಉರಿಸಿ, ಅದರ ಹೊಗೆಯನ್ನು ಜಾಡಿಯೊಳಗೆ ಹರಡುವಂತೆ ಮಾಡು. ಅನಿಲವು ಯಾವ ಆಕಾರ ಹೊಂದಿದೆ?

Gases spread over the entire space of the container and its volume changes.

ಅನಿಲವು ತಾನಿರುವ ಪಾತ್ರೆಯ ತುಂಬೆಲ್ಲಾ ಹರಡುತ್ತದೆ ಹಾಗೂ ಗಾತ್ರದಲ್ಲಿಯೂ ಬದಲಾಗುತ್ತದೆ.

Activity : Let us conduct an activity to know that the air has weight.

ಅನಿಲಗಳಿಗೂ ತೂಕವಿದೆ ಎಂಬುದನ್ನು ತಿಳಿಯಲು ಒಂದು ಚಟುವಟಿಕೆ ಮಾಡೋಣ.



Take a stick of 50cm length. Tie an air filled balloon to one of its end and an empty balloon to the other end. Tie

@KTBS NOT TO BE REPUBLISHED

a thread at the exact center of the stick as shown in the picture and hold it straight.

೨೦cm ಉದ್ದದ ಕಡ್ಡಿಯೊಂದನ್ನು ತೆಗೆದುಕೊ. ಕಡ್ಡಿಯ ಒಂದು ತುದಿಗೆ ಗಾಳಿ ತುಂಬಿದ ಬಲೂನ್ ಮತ್ತು ಇನ್ನೊಂದು ತುದಿಗೆ ಗಾಳಿ ತುಂಬದ ಬಲೂನನ್ನು ಕಟ್ಟು. ಕಡ್ಡಿಯ ಮಧ್ಯಭಾಗದಲ್ಲಿ ಚಿತ್ರದಲ್ಲಿ ಕಾಣಿಸಿದಂತೆ ದಾರವನ್ನು ಕಟ್ಟಿ ನೇರವಾಗಿ ಹಿಡಿ.

What do you observe? Write here.


ನೀನೇನು ಗಮನಿಸಿದೆ ಎಂಬುದನ್ನು ಇಲ್ಲಿ ಬರೆ.

_____

_____


2. Which is the natural satellite of the earth?
   ಭೂಮಿಯ ನೈಸರ್ಗಿಕ ಉಪಗ್ರಹ ಯಾವುದು?

   _____

   _____

3. Explain the characteristics of the following celestial bodies.
   ಈ ಆಕಾಶಕಾಯಗಳ ಪ್ರಮುಖ ಲಕ್ಷಣಗಳನ್ನು ಬರೆ.

Celestial bodies **ಆಕಾಶಕಾಯಗಳು**	**Important characteristics** **ಪ್ರಮುಖ ಲಕ್ಷಣಗಳು**
Meteoroids ಉಲ್ಕೆಗಳು	_____ _____
Asteroids ಕ್ಷುದ್ರ ಗ್ರಹಗಳು	_____ _____
Comets ಧೂಮಕೇತುಗಳು	_____ _____

@KTBS NOT TO BE REPUBLISHED

Do you know this? / ನಿನಗಿದು ಗೊತ್ತೆ?

- The Sun and other celestial bodies, orbiting the Sun is called Solar System.

  ಸೂರ್ಯ ಮತ್ತು ಅದರ ಸುತ್ತಲೂ ಸುತ್ತುವ ಆಕಾಶಕಾಯಗಳ ಸಮೂಹಕ್ಕೆ ಸೌರವ್ಯೂಹ ಎಂದು ಕರೆಯಲಾಗುವುದು.

- The two natural satellites of Mars are Phobos and Deimos.

  ಮಂಗಳ ಗ್ರಹದ ಎರಡು ನೈಸರ್ಗಿಕ ಉಪಗ್ರಹಗಳೆಂದರೆ, ಫೋಬೋಸ್ ಮತ್ತು ಡೈಮೋಸ್.

- Jupiter has more than 67 natural satellites and Saturn has more than 62 natural satellites.

  ಗುರುಗ್ರಹಕ್ಕೆ 67ಕ್ಕೂ ಹೆಚ್ಚು ನೈಸರ್ಗಿಕ ಉಪಗ್ರಹಗಳು ಮತ್ತು ಶನಿಗ್ರಹಕ್ಕೆ 62ಕ್ಕಿಂತಲೂ ಹೆಚ್ಚು ನೈಸರ್ಗಿಕ ಉಪಗ್ರಹಗಳಿವೆ.

- The Uranus has minimum 27 natural satellites whereas Neptune has 14 natural satellites.

  ಯುರೇನಸ್ ಗ್ರಹಕ್ಕೆ ಕನಿಷ್ಠ 27 ನೈಸರ್ಗಿಕ ಉಪಗ್ರಹಗಳಿದ್ದರೆ, ನೆಪ್ಚ್ಯೂನ್‌ಗೆ 14 ನೈಸರ್ಗಿಕ ಉಪಗ್ರಹಗಳಿವೆ.

- Mercury and Venus do not have any natural satellites.

  ಬುಧ ಮತ್ತು ಶುಕ್ರ ಗ್ರಹಗಳಿಗೆ ಯಾವುದೇ ನೈಸರ್ಗಿಕ ಉಪಗ್ರಹವಿಲ್ಲ.

- As known so far, the earth is the only planet on which there is life.

  ಇದುವರೆಗೆ ತಿಳಿದಂತೆ ಜೀವಿಗಳು ಕಂಡುಬರುವ ಏಕೈಕ ಗ್ರಹ ಭೂಮಿ.

NOT TO BE REPUBLISHED @KTBS

- The artificial satellites which revolve around the Earth are prepared by man for multiple purposes. Aryabhata is the first man-made satellite of India.

  ವಿವಿಧ ಉದ್ದೇಶಗಳಿಗಾಗಿ ಮಾನವರು ನಿರ್ಮಿಸಿದ ಅನೇಕ ಕೃತಕ ಉಪಗ್ರಹಗಳು ಭೂಮಿಯನ್ನು ಸುತ್ತುತ್ತಿವೆ. ಭಾರತ ನಿರ್ಮಿತ ಮೊದಲ ಕೃತಕ ಉಪಗ್ರಹ ಆರ್ಯಭಟ.

- Neil Armstrong was the first human being to land on the Moon.

  ಚಂದ್ರನ ಮೇಲೆ ಮೊದಲು ಕಾಲಿಟ್ಟವರು ನೀಲ್ ಆರ್ಮ್‌ಸ್ಟ್ರಾಂಗ್.

- Jupiter, Saturn, Uranus and Neptune are called Gas giant planets.

  ಗುರು, ಶನಿ, ಯುರೇನಸ್ ಮತ್ತು ನೆಪ್ಚ್ಯೂನ್‌ಗಳನ್ನು ಅನಿಲ ದೈತ್ಯಗ್ರಹಗಳು ಎನ್ನುತ್ತಾರೆ.

@KTBS NOT TO BE REPUBLISHED

LESSON - 15

OUR INDIA - PHYSICAL DIVERSITY

U1W7T8

India is our country. It has a variety of physical features such as Himalayan mountain ranges, very high peaks, plateaus, vast plains, coastal plains and islands, deserts, river systems. Together they make India-our country, which is unique in its natural setting and epitom of grandeur it is the home for a variety of plants and animals.

ಭಾರತ ನಮ್ಮ ದೇಶ. ಇದು ವೈವಿಧ್ಯಮಯವಾದ ಪರಿಸರವನ್ನು ಹೊಂದಿದೆ. ಹಿಮಾಲಯ ಪರ್ವತ ಶ್ರೇಣಿಗಳು, ಎತ್ತರವಾದ ಶಿಖರಗಳು, ಪ್ರಸ್ಥಭೂಮಿ, ವಿಶಾಲವಾದ ಮೈದಾನಗಳು, ಕಡಲ ತೀರಗಳು ಮತ್ತು ದ್ವೀಪಗಳು, ಮರುಭೂಮಿ, ನದಿಜಾಲಗಳು ಹೀಗೆ ಅನೇಕ ಪ್ರಾಕೃತಿಕ ವೈಶಿಷ್ಟ್ಯಗಳಿಂದ ಕೂಡಿದ ಭಾರತವು ಭವ್ಯತೆಯ ಪ್ರತಿರೂಪವಾಗಿದೆ. ಇದೊಂದು ವಿವಿಧ ಸಸ್ಯ–ಪ್ರಾಣಿಗಳಿಂದ ಕೂಡಿದ ಜೀವತಾಣವಾಗಿದೆ.

After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- understand the physical map of India.
  ಭಾರತದ ಪ್ರಾಕೃತಿಕ ವಿಭಾಗಗಳ ಭೂಪಟವನ್ನು ಪರಿಚಯ ಮಾಡಿಕೊಳ್ಳುವೆ.
- know about the Himalayan mountains, river basins, plateaus, coastal plains and desert.
  ಹಿಮಾಲಯ ಪರ್ವತ, ನದಿಬಯಲು, ಪ್ರಸ್ಥಭೂಮಿ, ಕರಾವಳಿ, ಮರುಭೂಮಿಗಳ ಬಗ್ಗೆ ತಿಳಿಯುವೆ.
- understand how the factors of natural environment influence the life of the people.
  ಜನಜೀವನದ ಮೇಲೆ ಪ್ರಾಕೃತಿಕ ಪರಿಸರದ ಅಂಶಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಗ್ರಹಿಸುವೆ.
- know the effects of physical factors on art and architecture.
  ಕಲೆ ಮತ್ತು ವಾಸ್ತುಶಿಲ್ಪದ ಮೇಲೆ ಪ್ರಾಕೃತಿಕ ಅಂಶಗಳ ಪ್ರಭಾವವನ್ನು ತಿಳಿಯುವೆ.

© KTBS NOT TO BE REPUBLISHED

- know about the important characteristics of weather and the climate of India.
  ಭಾರತದ ಹವಾಗುಣ – ವಾಯುಗುಣದ ಪ್ರಮುಖ ಲಕ್ಷಣಗಳ ಬಗ್ಗೆ ತಿಳಿಯುವೆ.
- know about the plants and animals of India.
  ಭಾರತದ ಸಸ್ಯ ಮತ್ತು ಪ್ರಾಣಿ ವರ್ಗಗಳ ಬಗ್ಗೆ ತಿಳಿಯುವೆ.

Physical divisions of India
ಭಾರತದ ಪ್ರಾಕೃತಿಕ ವಿಭಾಗಗಳು

Look at the map given in the next page. It shows the major physical divisions of India. With the help of this map you can easily identify the varied physical features of India.

ಮುಂದಿನ ಪುಟದಲ್ಲಿ ಕೊಟ್ಟಿರುವ ಭಾರತದ ಭೂಪಟವನ್ನು ವೀಕ್ಷಿಸು. ಇದು ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ನಿರೂಪಿಸುತ್ತದೆ. ಇದರಿಂದ ಭಾರತದಲ್ಲಿ ಪ್ರಾಕೃತಿಕ ವೈವಿಧ್ಯತೆ ಹೇಗಿದೆ ಎಂಬುದನ್ನು ಸುಲಭವಾಗಿ ಗುರುತಿಸಬಹುದು.

Instruction to the Teacher / ಶಿಕ್ಷಕರಿಗೆ ಸೂಚನೆ

Provide the facility to the students to refer to the Geo-maps on the computer by downloading the maps to understand the abstract concepts.

ಮಕ್ಕಳು ಕಂಪ್ಯೂಟರ್‌ನಲ್ಲಿ ಜಿಯೋಮ್ಯಾಪ್ ವೀಕ್ಷಿಸಲು ಅವಕಾಶ ಕಲ್ಪಿಸಿ. ಡೌನ್‌ಲೋಡ್ ಮಾಡಿದ ಚಿತ್ರಗಳ ಬಳಕೆಯು ಅಮೂರ್ತ ಪರಿಕಲ್ಪನೆಯನ್ನು ಮೂರ್ತಸ್ವರೂಪದಲ್ಲಿ ಅರ್ಥ ಮಾಡಿಕೊಳ್ಳಲು ಸಹಕರಿಸುತ್ತದೆ.


© KTBS NOT TO BE REPUBLISHED

What do you see in the map?
ಭೂಪಟದಲ್ಲಿ ಏನೆಲ್ಲಾ ಕಾಣುತ್ತಿದೆ?

When you look at the land surface of India, don't you notice the differences from one region to another? You see various types of landforms such as mountains, deep valleys-gorges, plains, plateaus etc. These differences, that we see on the land surface are known as **physical features**.

ಭಾರತದ ಭೂಭಾಗವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ದೃಷ್ಟಿಹರಿಸಿ ನೋಡುವಾಗ ಸಾಕಷ್ಟು ವ್ಯತ್ಯಾಸ ಕಾಣುತ್ತೇವೆ, ಅಲ್ಲವೆ? ಎತ್ತರವಾದ ಪರ್ವತ, ಆಳವಾದ

ಕಣಿವೆ–ಕಂದರ, ಸಮತಟ್ಟಾದ ಮೈದಾನ, ಪ್ರಸ್ಥಭೂಮಿ ಮೊದಲಾದ ವೈವಿಧ್ಯವನ್ನು ನಾವು ನೋಡಬಹುದು. ಈ ರೀತಿಯಲ್ಲಿ ಕಂಡುಬರುವ ಭೂ ಮೇಲ್ಮೈನ ವಿಶೇಷತೆಗಳನ್ನು ಅಲ್ಲಿನ **ಪ್ರಾಕೃತಿಕ ಲಕ್ಷಣ** ಎನ್ನುವರು.




Now let us study about the major physical divisions of India.
ಈಗ ಭಾರತದ ಪ್ರಾಕೃತಿಕ ವಿಭಾಗಗಳ ಬಗ್ಗೆ ತಿಳಿಯೋಣ.

1. **The Northern Mountains :** They consist mostly of the **Himalayan ranges.** When you look at the northern part of the map you will notice that the Himalayan ranges extend

from Kashmir to Meghalaya. The Himalayas are the highest mountains in the world.

ಉತ್ತರದ ಪರ್ವತಗಳು : ಈ ವಿಭಾಗವು ಬಹುವಾಗಿ **ಹಿಮಾಲಯ ಪರ್ವತ**ಗಳನ್ನು ಒಳಗೊಂಡಿದೆ. ನೀನೀಗ ಭಾರತ ಭೂಪಟದ ಉತ್ತರಕ್ಕೆ ನೋಡು, ಕಾಶ್ಮೀರದಿಂದ ಮೇಘಾಲಯದವರೆಗೆ ಹಿಮಾಲಯ ಪರ್ವತಶ್ರೇಣಿ ಹಬ್ಬಿರುವುದನ್ನು ಕಾಣುವೆ. ಇವು ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಪರ್ವತಗಳಾಗಿವೆ.



Characteristics of the Himalayan ranges.

ಹಿಮಾಲಯ ಪರ್ವತಗಳ ಪ್ರಮುಖ ಲಕ್ಷಣಗಳು

- They are covered with snow. Hence they are called **Himalayas**.

  ಹಿಮದಿಂದ ಆವರಿಸಿರುತ್ತವೆ. ಹೀಗಾಗಿ ಇವುಗಳನ್ನು **ಹಿಮಾಲಯ ಪರ್ವತ**ಗಳು ಎನ್ನುವರು.

- They have many high peaks.

  ಅತಿ ಎತ್ತರವಾದ ಶಿಖರಗಳನ್ನು ಹೊಂದಿರುತ್ತವೆ.

- There are many deep valleys and gorges.

  ಇಲ್ಲಿ ಆಳವಾದ ಕಣಿವೆ ಮತ್ತು ಕಂದರಗಳಿರುತ್ತವೆ.

© DSERT NOT TO BE REPUBLISHED

- There are glaciers and the highest mountain passes.
  ಹಿಮನದಿ ಮತ್ತು ಎತ್ತರವಾದ ಪರ್ವತ ಘಾಟಿಗಳಿಂದ ಕೂಡಿರುತ್ತವೆ.
- There are hot springs.
  ಇಲ್ಲಿ ಬಿಸಿನೀರಿನ ಬುಗ್ಗೆಗಳಿವೆ.
- There is a variety of plant and animal species.
  ವಿವಿಧ ಸಸ್ಯ–ಪ್ರಾಣಿ ಪ್ರಭೇದಗಳನ್ನು ಹೊಂದಿವೆ.





Advantages
ಅನುಕೂಲಗಳು

- Himalayas prevent the cold winds from central Asia blowing into India.
  ಅತಿ ಶೀತ ಪ್ರದೇಶವಾಗಿರುವ ಮಧ್ಯ ಏಷ್ಯಾದಿಂದ ಬೀಸಿಬರುವ ಶೀತಮಾರುತಗಳನ್ನು ಇವು ತಡೆಯುತ್ತವೆ.
- They are the source of many North Indian rivers.
  ಉತ್ತರ ಭಾರತದ ನದಿಗಳಿಗೆ ಉಗಮ ಸ್ಥಾನಗಳಾಗಿವೆ.
- They check the monsoon winds and cause heavy rainfall.
  ಮಾನ್ಸೂನ್ ಮಾರುತಗಳನ್ನು ತಡೆದು ಅಧಿಕ ಮಳೆಯಾಗಲು ಕಾರಣವಾಗಿವೆ.
- They are like a gigantic wall and are natural northern frontiers to control foreign invasions.
  ಬೃಹತ್ ಗೋಡೆಯಂತೆ ಉತ್ತರದ ನೈಸರ್ಗಿಕ ಗಡಿಯಾಗಿದ್ದು, ಪರಕೀಯರ ದಾಳಿಯನ್ನು ನಿಯಂತ್ರಿಸುತ್ತವೆ.

@KTBS NOT TO BE REPUBLISHED



Know this

- A **mountain range** is a group of or chain of many mountains extended to thousands of kilometes.

  ಸಾವಿರಾರು ಕಿಲೋಮೀಟರ್‌ಗಳ ದೂರದವರೆಗೂ ಹಲವು ಪರ್ವತಗಳು ಸಾಲುಸಾಲಾಗಿ ಹಬ್ಬಿಕೊಂಡಿರುವುದನ್ನು **ಪರ್ವತಶ್ರೇಣಿ**ಗಳು ಎನ್ನುತ್ತೇವೆ.

- The Aravalli, the Western Ghats, the Eastern Ghats, Vindhyas, Satpura ranges are the other important mountain ranges in India.

  ಅರಾವಳಿ, ಪಶ್ಚಿಮಘಟ್ಟ, ಪೂರ್ವಘಟ್ಟ, ವಿಂಧ್ಯಾ, ಸಾತ್ಪುರ ಶ್ರೇಣಿಗಳು ಭಾರತದ ಇತರ ಪ್ರಮುಖ ಪರ್ವತ ಶ್ರೇಣಿಗಳಾಗಿವೆ.

- The population is less because of the severe cold in the Himalayan ranges.

  ಹಿಮಾಲಯ ಪರ್ವತ ಶ್ರೇಣಿಯಲ್ಲಿ ಮೈಕೊರೆಯುವಷ್ಟು ಚಳಿ ಇರುವುದರಿಂದ ಇಲ್ಲಿ ಹೆಚ್ಚು ಜನರು ವಾಸಿಸುವುದಿಲ್ಲ.

- The Indus, the Ganga, the Yamuna and the Brahmaputra rivers have their source in the Himalayan ranges.

  ಸಿಂಧೂ, ಗಂಗಾ, ಯಮುನಾ, ಬ್ರಹ್ಮಪುತ್ರ ನದಿಗಳು ಈ ಪರ್ವತ ಶ್ರೇಣಿಯಲ್ಲಿಯೇ ಹುಟ್ಟಿ ಹರಿಯುತ್ತವೆ.

©KTBS NOT TO BE REPUBLISHED

Answer the following questions.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.

1) Find out the names of animals which live in the foot hills of the Himalayas and make a list of them.

   ಹಿಮಾಲಯ ಪರ್ವತಗಳ ತಪ್ಪಲಿನಲ್ಲಿ ವಾಸಿಸುವ ಪ್ರಾಣಿಗಳ ಹೆಸರನ್ನು ತಿಳಿದು ಪಟ್ಟಿಮಾಡು.

   _____

   _____

   _____

   _____

   _____

2) Wide and long valley in the lower Himalayas is called **Doon**. **For example, Dehradun** in India. It is a popular tourist place. During summer people visit this place. Why do they visit it?

ಹಿಮಾಲಯ ಪರ್ವತದ ತಗ್ಗು ಭಾಗಗಳಲ್ಲಿ ಸಮತಟ್ಟಾದ, ನೀಳ ಹಾಗೂ ವಿಶಾಲವಾದ ಭಾಗಗಳಿರುತ್ತವೆ. ಇವುಗಳನ್ನು **ಡೂನ್** ಎಂದು ಕರೆಯುತ್ತಾರೆ. **ಉದಾಹರಣೆಗೆ,** ಭಾರತದ **ಡೆಹರಾಡೂನ್**. ಇದು ಪ್ರಸಿದ್ಧ ಪ್ರವಾಸಿ ತಾಣವಾಗಿದೆ. ಜನರು ಬೇಸಿಗೆಯಲ್ಲಿ ಇಲ್ಲಿಗೆ ಪ್ರವಾಸಕ್ಕಾಗಿ ಹೋಗುತ್ತಾರೆ. ಏಕೆ?

_____

_____

_____

3) If there are mountains/mountain ranges/ghats near or surrounding your place, write their names.

ನಿಮ್ಮೂರಿನ ಸಮೀಪ ಅಥವಾ ಸುತ್ತಮುತ್ತ ಪರ್ವತ/ಪರ್ವತ ಶ್ರೇಣಿ/ ಬೆಟ್ಟಗುಡ್ಡಗಳು ಇದ್ದಲ್ಲಿ, ಅವುಗಳನ್ನು ಹೆಸರಿಸು.

_____ _____

_____ _____

_____ _____

_____ _____

_____ _____

_____ _____

_____ _____

4) Collect a picture of any one animal living in the foot hills of the Himalayas. Paste it in the blank box. Write about it in 3 sentences.

© KTBS NOT TO BE REPUBLISHED

ಹಿಮಾಲಯ ಪರ್ವತಗಳ ತಪ್ಪಲಿನಲ್ಲಿ ವಾಸಿಸುವ ಯಾವುದಾದರೂ ಒಂದು ಪ್ರಾಣಿಯ ಚಿತ್ರವನ್ನು ಸಂಗ್ರಹಿಸಿ, ಖಾಲಿ ಜಾಗದಲ್ಲಿ ಅಂಟಿಸು. ಇದರ ಬಗ್ಗೆ 3 ವಾಕ್ಯಗಳನ್ನು ಬರೆ.

_____

_____

_____

@KTBS NOT TO BE REPUBLISHED

Do you know this?


- Mt. Everest is the highest peak (8,848m) in the world.
  ಮೌಂಟ್ ಎವರೆಸ್ಟ್ ಶಿಖರವು (8,848ಮೀ.) ಪ್ರಪಂಚದಲ್ಲೇ ಎತ್ತರವಾದುದು.
- Mt. Godwin Austin or Mt. K_2 (8,611m) is the highest peak in India.
  ಮೌಂಟ್ ಗಾಡ್ವಿನ್ ಆಸ್ಟಿನ್ ಅಥವಾ K_2 (8,611 ಮೀ.) ಭಾರತದ ಅತ್ಯಂತ ಎತ್ತರವಾದ ಶಿಖರ.
- Mullayanagiri (1,913m) is the highest peak in Karnataka.
  ಮುಳ್ಳಯ್ಯನಗಿರಿ (1913 ಮೀ.) ಕರ್ನಾಟಕದ ಅತಿ ಎತ್ತರವಾದ ಶಿಖರ.
- Annaimudi (2,665m) is the highest peak in South India.
  ಅನ್ನೈಮುಡಿ (2665 ಮೀ.) ದಕ್ಷಿಣ ಭಾರತದ ಎತ್ತರವಾದ ಶಿಖರ.

Know this

- Air cools as we climb higher places.
  ಎತ್ತರ ಪ್ರದೇಶದ ಮೇಲ್ಭಾಗಕ್ಕೆ ಹೋದಂತೆ ವಾಯು ತಂಪಾಗುತ್ತದೆ.
- The rivers which have their source in the foot hills of Himalayan ranges have plenty of water even during summer.
  ಹಿಮಾಲಯ ಪರ್ವತದ ತಪ್ಪಲಿನಿಂದ ಹುಟ್ಟಿ ಹರಿಯುವ ನದಿಗಳು ಬೇಸಿಗೆಯಲ್ಲಿಯೂ ತುಂಬಿ ಹರಿಯುತ್ತವೆ.

2. The Northern Plains : When we talk about the plains, we remember a playground don't we? Usually a playground is plain in level with no obstruction to play games. Similarly, there are plains located to the south of the Himalayan ranges. They are very vast, fertile and level areas. Locate this physical division on the map.

ಉತ್ತರದ ಮೈದಾನಗಳು : ಮೈದಾನ ಎಂದಾಗ ಆಟದ ಮೈದಾನ ನೆನಪಾಗುತ್ತದೆ, ಅಲ್ಲವೆ? ಆಟದ ಮೈದಾನ ನೋಡಲು ಸಮತಟ್ಟಾಗಿದ್ದು ವಿಶಾಲವಾಗಿರುತ್ತದೆ. ಆಟಕ್ಕೆ ಯಾವುದೇ ಅಡೆ–ತಡೆ ಇರುವುದಿಲ್ಲ. ಹಾಗೆಯೇ ಹಿಮಾಲಯ ಪರ್ವತ ಸಾಲುಗಳ ದಕ್ಷಿಣ ಭಾಗದಲ್ಲಿ ಮೈದಾನಗಳಿವೆ. ಇವು ಅತಿ ವಿಶಾಲವಾದ, ಫಲವತ್ತಾದ ಹಾಗೂ ಸಮತಟ್ಟಾದ ಭೂಪ್ರದೇಶಗಳಾಗಿವೆ. ಭೂಪಟದಲ್ಲಿ ಈ ಭಾಗವನ್ನು ಗುರುತಿಸು.



NOT TO BE REPUBLISHED ©KTBS



Know this

- The Northern plains of India are formed by the deposition of alluvium carried by the rivers while flowing from the Himalayan ranges. These plains are known as **Indus, Ganga and Brahmaputra plains.**

  ಹಿಮಾಲಯದಿಂದ ನದಿಗಳು ಹರಿಯುವಾಗ ಹೊತ್ತು ತಂದು ಸಂಚಯ ಮಾಡಿದ ಮೆಕ್ಕಲು ಮಣ್ಣಿನಿಂದಾಗಿ ಉತ್ತರದ ಮೈದಾನಗಳು ರೂಪುಗೊಂಡಿವೆ. ಇವುಗಳನ್ನು **ಸಿಂಧೂ – ಗಂಗಾ – ಬ್ರಹ್ಮಪುತ್ರ ನದಿಬಯಲುಗಳು** ಎಂದು ಕರೆಯುತ್ತಾರೆ.

- These plains are situated between the Himalayan mountains and Peninsular plateaus.

  ಹಿಮಾಲಯ ಪರ್ವತ ಮತ್ತು ಪರ್ಯಾಯ ಪ್ರಸ್ಥಭೂಮಿಗಳ ನಡುವೆ ಈ ಮೈದಾನಗಳಿವೆ.

- The Sutlej, the Ganga, the Brahmaputra and their tributaries flow through these plains.

  ಸಟ್ಲೇಜ್, ಗಂಗಾ, ಬ್ರಹ್ಮಪುತ್ರ ಮತ್ತು ಅವುಗಳ ಉಪನದಿಗಳು ಇಲ್ಲಿ ಹರಿಯುತ್ತವೆ.

- The soil of these plains is very fertile due to the deposition of alluvium by the rivers.

  ನದಿಗಳು ಮೆಕ್ಕಲು ಮಣ್ಣನ್ನು ಸಂಚಯ ಮಾಡುವುದರಿಂದ ಈ ಭಾಗವು ಹೆಚ್ಚು ಫಲವತ್ತತೆಯಿಂದ ಕೂಡಿರುತ್ತದೆ.

- Crops such as wheat, paddy, cotton, maize, sugarcane etc., are grown here.

  ಗೋಧಿ, ಭತ್ತ, ಹತ್ತಿ, ಮೆಕ್ಕೆಜೋಳ, ಕಬ್ಬು ಇತ್ಯಾದಿ ಬೆಳೆಗಳನ್ನು ಇಲ್ಲಿ ಬೆಳೆಯುತ್ತಾರೆ.

- These fertile plains are known as the **Food store house of India.**

  ಫಲವತ್ತಾದ ಈ ಬಯಲುಗಳನ್ನು **ಭಾರತದ ಆಹಾರ ಕಣಜ** ಎಂದು ಕರೆಯುತ್ತಾರೆ.

©KTBS NOT TO BE REPUBLISHED

Observe : In the river plains, there is plenty of water. Therefore agriculture, rearing of animals, transport facilities, trade and commerce and industries are developed. Hence these plains are densely populated.

ನದಿ ಮೈದಾನಗಳು ಇರುವಲ್ಲಿ ನೀರಿನ ಸೌಲಭ್ಯ ದೊರಕುವುದರಿಂದ ಕೃಷಿ ಚಟುವಟಿಕೆಗಳು, ಸಾರಿಗೆ-ಸೌಕರ್ಯ, ಪ್ರಾಣಿಸಾಕಾಣಿಕೆ, ವ್ಯಾಪಾರ-ವಹಿವಾಟು, ಕೈಗಾರಿಕೆಗಳು ಅಭಿವೃದ್ಧಿ ಹೊಂದುವುವು. ಆದ್ದರಿಂದ ಈ ಭಾಗದಲ್ಲಿ ಜನರು ಹೆಚ್ಚಾಗಿ ನೆಲೆಸುತ್ತಾರೆ.

Diversity in physical features has influence on the tradition and culture of the people of that area. Many towns and cities of Harappa civilization have developed on the river banks. Even now there are many famous historical cities and pilgrimage places situated on river banks. On account of the ideal conditions for settlement, many empires ruled in the Northern plains. **For example,** Maurya, Mughal and Gupta empires. You will learn about this in the higher classes.

ಪ್ರಾಕೃತಿಕ ವೈವಿಧ್ಯತೆಯು ಅಲ್ಲಿ ವಾಸಿಸುವ ಜನರ ಆಚಾರ-ವಿಚಾರ ಮತ್ತು ಸಂಸ್ಕೃತಿಯ ಮೇಲೆ ಪ್ರಭಾವ ಬೀರುತ್ತದೆ. ಹರಪ್ಪ ನಾಗರಿಕತೆಯ ಹಲವು ನಗರಗಳು ನದಿ ದಂಡೆಯಲ್ಲಿ ನಿರ್ಮಾಣಗೊಂಡಿದ್ದವು. ಈಗಲೂ ಅನೇಕ ಐತಿಹಾಸಿಕ ಪ್ರಸಿದ್ಧ ನಗರ ಮತ್ತು ಯಾತ್ರಾ ಸ್ಥಳಗಳನ್ನು ಇಲ್ಲಿ ಕಾಣಬಹುದು. ವಾಸಕ್ಕೆ ಯೋಗ್ಯವಾದ ಬಹಳಷ್ಟು ಪರಿಸ್ಥಿತಿಗಳು ಇದ್ದ ಕಾರಣ ಉತ್ತರ ಭಾರತದ ಮೈದಾನದಲ್ಲಿ ವಿವಿಧ ಸಾಮ್ರಾಜ್ಯಗಳು ಆಳ್ವಿಕೆಯನ್ನು ನಡೆಸಿವೆ. **ಉದಾಹರಣೆಗೆ,** ಮೌರ್ಯ, ಮೊಘಲ್ ಮತ್ತು ಗುಪ್ತ ಸಾಮ್ರಾಜ್ಯಗಳು. ಈ ಬಗ್ಗೆ ಮುಂದಿನ ತರಗತಿಗಳಲ್ಲಿ ತಿಳಿಯುವೆ.

© KTBS NOT TO BE REPUBLISHED

Observe these pictures. Where do you find them in India? Mention the places. (Take the help of the teacher)

ಈ ಚಿತ್ರಗಳನ್ನು ಗಮನಿಸಿ, ಹೆಸರಿಸು. ಭಾರತದಲ್ಲಿ ಇವುಗಳನ್ನು ಎಲ್ಲೆಲ್ಲಿ ಕಾಣುವೆ? ತಿಳಿಸು. (ಶಿಕ್ಷಕರ ಸಹಾಯ ಪಡೆ)







The plains are more helpful for the growth of architecture. Since these regions have level land it is easy to construct big buildings. Naturally available of different types of sand, metal, rocks, wood, plant fibres, soil, ideal site, craftsmen etc., also helped in the development of architecture in those places. **For example**, huge palaces were constructed in Rajastan, the Taj Mahal in Agra was built by using marble rock.

ವಾಸ್ತುಶಿಲ್ಪಗಳ ರಚನೆಗೆ ಮೈದಾನ ಪ್ರದೇಶಗಳು ಹೆಚ್ಚು ಸಹಕಾರಿ. ಇವು ಸಮತಟ್ಟಾಗಿರುವ ಕಾರಣ ವಿಶಾಲ ವಿನ್ಯಾಸದ ಕಟ್ಟಡಗಳ ನಿರ್ಮಾಣ ಸುಲಭ. ಪ್ರಕೃತಿದತ್ತವಾಗಿ ಆಯಾ ಭಾಗದಲ್ಲಿ ದೊರೆಯುವ ಮರಳು, ಲೋಹ, ವಿವಿಧ ಶಿಲೆಗಳು, ಮರಮುಟ್ಟುಗಳು, ಸಸ್ಯಜನ್ಯ ನಾರುಗಳು, ಮಣ್ಣು, ಯೋಗ್ಯವಾದ ನೆಲ, ಕುಶಲ ಕರ್ಮಿಗಳು ಮೊದಲಾದ ಸೌಲಭ್ಯಗಳು ವಾಸ್ತುಶಿಲ್ಪದ ಬೆಳವಣಿಗೆಗೆ ನೆರವು ನೀಡುತ್ತವೆ. **ಉದಾಹರಣೆಗೆ,** ರಾಜಸ್ತಾನದಲ್ಲಿ ವಿಶಾಲ ಅರಮನೆಗಳು ನಿರ್ಮಾಣಗೊಂಡಿವೆ. ಆಗ್ರಾದ ತಾಜಮಹಲ್ ಅಮೃತ ಶಿಲೆಯಿಂದ ರಚನೆಗೊಂಡಿದೆ.

Observe

- The inner walls of Kollur, Dharmastala, Kukke Subramanya temples in Karnataka are made of wood.
  ಕರ್ನಾಟಕದ ಕೊಲ್ಲೂರು, ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯದ ದೇವಾಲಯಗಳ ಒಳಗೋಡೆಗಳನ್ನು ಮರಗಳಿಂದ ನಿರ್ಮಿಸಲಾಗಿದೆ.
- Houses in Kashmir valley are built using logs.
  ಕಾಶ್ಮೀರ ಕಣಿವೆಗಳಲ್ಲಿ ಮನೆಗಳನ್ನು ಮರದ ದಿಮ್ಮಿಗಳಿಂದ ನಿರ್ಮಿಸಿದ್ದಾರೆ.
- Buildings were constructed using Kadapa rock in Raichur district (Karnataka) and parts of Andhra Pradesh.
  ರಾಯಚೂರು ಮತ್ತು ಆಂಧ್ರಪ್ರದೇಶದ ಕೆಲವು ಭಾಗದಲ್ಲಿ ಕಟ್ಟಡಗಳನ್ನು ಕಡಪ ಕಲ್ಲಿನಿಂದ ನಿರ್ಮಿಸಿದ್ದಾರೆ.
- In recent years red granite rocks are used for the construction of buildings in Bagalkote and surroundings.
  ಇತ್ತೀಚೆಗೆ ಬಾಗಲಕೋಟೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಕಟ್ಟಡಗಳ ನಿರ್ಮಾಣದಲ್ಲಿ ಕೆಂಪು ಗ್ರಾನೈಟ್ ಶಿಲೆಯ ಬಳಕೆ ಹೆಚ್ಚಾಗಿ ಕಂಡುಬರುತ್ತಿದೆ.
- Belur and Halebidu in Karnataka and most of the temples of Tamil Nadu are spacious, built by using soapstone.
  ಕರ್ನಾಟಕದ ಬೇಲೂರು, ಹಳೇಬೀಡು ಮತ್ತು ತಮಿಳುನಾಡಿನ ಬಹಳಷ್ಟು ದೇವಾಲಯಗಳು ವಿಶಾಲವಾಗಿದ್ದು, ಇವು ಕಲ್ಲಿನಿಂದ (ಬಳಪದ ಕಲ್ಲು) ನಿರ್ಮಾಣಗೊಂಡಿವೆ.
- Sandstone cave temples are found in Badami of Karnataka.
  ಕರ್ನಾಟಕದ ಬಾದಾಮಿ ಎಂಬಲ್ಲಿ ಮರಳುಗಲ್ಲಿನ ಗುಹಾಂತರ ದೇವಾಲಯಗಳು ಇವೆ.

© KTBS NOT TO BE REPUBLISHED

Answer the following questions :

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.

1. What are the reasons for the fertile of the Northern plains?
   ಉತ್ತರದ ಮೈದಾನಗಳು ಫಲವತ್ತಾಗಿರಲು ಕಾರಣವೇನು?

   _____

   _____

2. The people prefer to live in the plains of a river. Why?
   ನದಿಬಯಲಿನಲ್ಲಿ ಜನರು ಹೆಚ್ಚಾಗಿ ವಾಸಿಸಲು ಬಯಸುತ್ತಾರೆ. ಏಕೆ?

   _____

   _____

3. Make a list of the important rivers and crops of our state.
   ನಮ್ಮ ರಾಜ್ಯದ ಪ್ರಮುಖ ನದಿಗಳು ಹಾಗೂ ಬೆಳೆಗಳನ್ನು ಪಟ್ಟಿಮಾಡು.

Rivers / ನದಿಗಳು	**Crops / ಬೆಳೆಗಳು**

@KTBS NOT TO BE REPUBLISHED

4. Mark the river Ganga, Brahmaputra and Yamuna on the outline map of India.
   ಭಾರತದ ಭೂಪಟದಲ್ಲಿ ಗಂಗಾ, ಬ್ರಹ್ಮಪುತ್ರ ಮತ್ತು ಯಮುನಾ ನದಿಗಳನ್ನು ಗುರುತಿಸು.

5. A challenge to you (discuss in groups)
   ನಿನಗೊಂದು ಸವಾಲು : (ಗುಂಪಿನಲ್ಲಿ ಚರ್ಚಿಸು)

It is very essential to maintain cleanliness on the banks of rivers. Now the rivers of India are affected by water pollution. The harmful activities of human beings destroy the sources of drinking water.

ನದಿ ತೀರದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು ಬಹಳ ಮುಖ್ಯ. ಇಂದು ಭಾರತದ ನದಿಗಳು ಜಲಮಾಲಿನ್ಯದಿಂದ ಕೂಡಿವೆ. ಮಾನವನ ಅಹಿತಕರ ಚಟುವಟಿಕೆಗಳು ಕುಡಿಯುವ ನೀರಿನ ಮೂಲವನ್ನೇ ಹಾಳುಮಾಡುತ್ತಿವೆ.

Do you know how the rivers are polluted?

ಒಂದು ನದಿ ಹೇಗೆಲ್ಲಾ ಕಲುಷಿತವಾಗುತ್ತದೆ ಎಂದು ನಿನಗೆ ಗೊತ್ತೆ?

- Plastics, several types of toxic waste and effluents of industries are dumped into the river water.
  ಪ್ಲಾಸ್ಟಿಕ್ ವಸ್ತುಗಳು, ಹಲವು ವಿಷಕಾರಿ ತ್ಯಾಜ್ಯಗಳು ಹಾಗೂ ಕಾರ್ಖಾನೆಯ ಅನುಪಯುಕ್ತ ವಸ್ತುಗಳನ್ನು ನದಿಗಳ ನೀರಿನಲ್ಲಿ ಹಾಕಲಾಗುತ್ತಿದೆ.
- Idols or images, painted with different chemical paints are immersed in the river water.
  ವಿವಿಧ ರಾಸಾಯನಿಕ ಬಣ್ಣಗಳ ಲೇಪನದ ವಿಗ್ರಹ / ಮೂರ್ತಿಗಳನ್ನು ನೀರಿನಲ್ಲಿ ಬಿಡಲಾಗುತ್ತಿದೆ.
- The chemical effluents which are released by industries are let into the river water.
  ಕೈಗಾರಿಕೆಗಳಿಂದ ಬಿಡುಗಡೆಯಾಗುವ ರಾಸಾಯನಿಕ ತ್ಯಾಜ್ಯಗಳು ನದಿಗಳ ನೀರಿಗೆ ಸೇರುತ್ತವೆ.
- Big cities produce a large amount of garbage in different forms which is thrown into the rivers and the water gets contaminated.
  ಮಹಾನಗರಗಳಲ್ಲಿ ಉತ್ಪತ್ತಿಯಾಗುವ ಸಾವಿರಾರು ಟನ್‌ಗಳಷ್ಟು ವಿವಿಧ ರೂಪದ ತ್ಯಾಜ್ಯಗಳು ಸೇರಿ ನದಿಯ ನೀರನ್ನು ವಿಷವನ್ನಾಗಿ ಮಾಡಿವೆ.
- Mining activities also cause pollution of rivers. **For example,** river of Kali, Bhadra etc.,
  ಗಣಿಗಾರಿಕೆಯಿಂದಲೂ ನದಿಗಳು ಕಲುಷಿತವಾಗುತ್ತವೆ.
  ಉದಾಹರಣೆಗೆ, ಕಾಳಿ ನದಿ, ಭದ್ರಾ ನದಿ ಇತ್ಯಾದಿ.

©KTBS NOT TO BE REPUBLISHED

Now the Ganga river water cleaning programme is under progress. Is it necessary to clean it? What are the benefits of cleaning river water? Write here.

ಇಂದು ಗಂಗಾನದಿಯ ಶುದ್ಧೀಕರಣದ ಕೆಲಸಗಳು ನಡೆಯುತ್ತಿವೆ. ಶುದ್ಧೀಕರಿಸುವುದು ಅವಶ್ಯವೆ? ನದಿಗಳನ್ನು ಶುದ್ಧೀಕರಿಸುವುದರಿಂದ ಆಗುವ ಅನುಕೂಲಗಳೇನು? ಇಲ್ಲಿ ಬರೆ.

_____

_____

_____

_____

_____

_____


_____

_____

@KTBS NOT TO BE REPUBLISHED

3. The Peninsular Plateau : Identify the Narmada river on the map of India. The Narmada-Sone rift valley divides the Peninsular plateau into two major parts. The northern part is called the **Malwa plateau** and the southern part is called the **Deccan plateau**. The Aravalli ranges lie to the north-west of Malwa plateau and the Vindhyas lie to the south. **Mt.Gurushikhar** (1722 m.) is the highest peak in the Aravalli range.

ಪರ್ಯಾಯ ಪ್ರಸ್ಥಭೂಮಿ : ಭೂಪಟದಲ್ಲಿ ನರ್ಮದಾ ನದಿಯನ್ನು ಗುರ್ತಿಸು. ನರ್ಮದಾ–ಸೋನೆ ನದಿ ಸೀಳು ಕಣಿವೆಯು ಈ ಭೂಭಾಗವನ್ನು ಎರಡು ಭಾಗಗಳಾಗಿ ವಿಂಗಡಿಸುತ್ತದೆ. ಉತ್ತರದ ಭಾಗವನ್ನು **ಮಾಳ್ವ ಪ್ರಸ್ಥಭೂಮಿ** ಎಂದೂ, ದಕ್ಷಿಣ ಭಾಗವನ್ನು **ದಖನ್ ಪ್ರಸ್ಥಭೂಮಿ** ಎಂದೂ ಕರೆಯುತ್ತಾರೆ. ಮಾಳ್ವ ಪ್ರಸ್ಥಭೂಮಿಯ ಉತ್ತರದಲ್ಲಿ ಅರಾವಳಿ ಮತ್ತು ದಕ್ಷಿಣದಲ್ಲಿ ವಿಂಧ್ಯಾ ಪರ್ವತಗಳಿವೆ. **ಗುರುಶಿಖರ** (1722 ಮೀ.) ಎಂಬುದು ಅರಾವಳಿ ಸರಣಿಯ ಅತಿ ಎತ್ತರದ ಶಿಖರ.



The Satpura, Maikala, Rajmahal, Amara Kantaka ranges lie to the north of Deccan plateau. The Western Ghats are in the west and the Eastern Ghats are in the east. The Annamalai, Cardamom and Palani hills are to the south of Western Ghats. The Western ghats and the Eastern ghats meet at the Nilgiri hills. Udhagamandala (Ooty), a famous hill station, is situated here. Many rivers of peninsular India have their source in the Western ghats.

ದಖನ್ ಪ್ರಸ್ಥಭೂಮಿಯ ಉತ್ತರದಲ್ಲಿ ಸಾತ್ಪುರ, ಮೈಕೇಲ, ರಾಜಮಹಲ್, ಅಮರಕಂಟಕ ಮುಂತಾದ ಶ್ರೇಣಿಗಳಿವೆ. ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳು ಮತ್ತು ಪೂರ್ವದಲ್ಲಿ ಪೂರ್ವ ಘಟ್ಟಗಳಿವೆ. ಪಶ್ಚಿಮ ಘಟ್ಟಗಳ ದಕ್ಷಿಣಕ್ಕೆ ಅಣ್ಣಾಮಲೈ, ಪಳನಿ ಮತ್ತು ಕಾರ್ಡಮಮ್ ಬೆಟ್ಟಗಳಿವೆ. ಪಶ್ಚಿಮ ಮತ್ತು ಪೂರ್ವ ಘಟ್ಟಗಳು ನೀಲಗಿರಿ ಬೆಟ್ಟಗಳಲ್ಲಿ ಕೂಡುತ್ತವೆ. ಇಲ್ಲಿ ಉದಕಮಂಡಲ (ಊಟಿ) ಎಂಬ ಪ್ರಸಿದ್ಧ ಗಿರಿಧಾಮವಿದೆ. ಪಶ್ಚಿಮ ಘಟ್ಟಗಳಲ್ಲಿ ದಕ್ಷಿಣ ಭಾರತದ ಹಲವು ನದಿಗಳು ಉಗಮಿಸುತ್ತವೆ.

© DSERT NOT TO BE REPUBLISHED

Characteristics of the plateau

ಪ್ರಸ್ಥಭೂಮಿಯ ಪ್ರಮುಖ ಲಕ್ಷಣಗಳು

- It is an upland with an extensive, almost level surface which is bounded by steep slopes.

  ಪ್ರಸ್ಥಭೂಮಿಯು ಸುತ್ತಮುತ್ತಲಿನ ಪ್ರದೇಶಗಳಿಗಿಂತ ಎತ್ತರವಾಗಿದ್ದು, ಮೇಲ್ಭಾಗದಲ್ಲಿ ಸಮತಟ್ಟಾಗಿರುವ ಹಾಗೂ ಕಡಿದಾದ ಬದಿಗಳನ್ನುಳ್ಳ ಭೂಪ್ರದೇಶವನ್ನು ಹೊಂದಿರುತ್ತದೆ.
- This landform is an extensive area of relatively flat land.

  ಈ ಭೂಭಾಗವು ಸಾಕಷ್ಟು ವಿಶಾಲವಾಗಿದ್ದು, ಸಮತಟ್ಟಾಗಿರುತ್ತದೆ.
- The Deccan plateau is the largest plateau in India. It is made up of the ancient hard rocks.

  ದಖನ್ ಪ್ರಸ್ಥಭೂಮಿಯು ಭಾರತದ ಅತಿದೊಡ್ಡ ಪ್ರಸ್ಥಭೂಮಿಯಾಗಿದೆ. ಇದು ಪುರಾತನ ಗಟ್ಟಿ ಶಿಲೆಗಳಿಂದ ರಚನೆಯಾಗಿದೆ.

Advantages

ಪ್ರಮುಖ ಅನುಕೂಲಗಳು

- The peninsular plateau is rich in minerals.

  ಪರ್ಯಾಯ ಪ್ರಸ್ಥಭೂಮಿಯು ಸಮೃದ್ಧ ಖನಿಜ ಸಂಪತ್ತನ್ನು ಹೊಂದಿದೆ.
- The rivers flowing through it are helpful for the cultivation of crops.

  ಇಲ್ಲಿ ಹರಿಯುವ ನದಿಗಳು ಬೆಳೆಗಳನ್ನು ಬೆಳೆಯಲು ಸಹಕಾರಿಯಾಗಿವೆ.
- There are many waterfalls which are useful for the generation of hydro-electricity.

  ಇಲ್ಲಿ ಅನೇಕ ಜಲಪಾತಗಳಿದ್ದು, ಜಲವಿದ್ಯುತ್ ತಯಾರಿಕೆಗೆ ಇವು ಉಪಯುಕ್ತವಾಗಿವೆ.
- It is favourable for agriculture, rearing of animals and industries.

  ಕೃಷಿ, ಪ್ರಾಣಿ ಸಾಕಣೆ ಮತ್ತು ಕೈಗಾರಿಕೆಗೆ ಅನುಕೂಲಕರವಾಗಿವೆ.

Several empires also ruled in the peninsular plateau. The Rashtrakutas, Chalukyas, Hoysalas, Vijayanagaras, Kadambas, the Gangas and Bahamani sultans established

@KTBS NOT TO BE REPUBLISHED

their empires here. You will study more about them in the higher classes.

ಪರ್ಯಾಯ ಪ್ರಸ್ಥಭೂಮಿಗಳಲ್ಲಿಯೂ ಅನೇಕ ಸಾಮ್ರಾಜ್ಯಗಳು ತಮ್ಮ ಆಳ್ವಿಕೆಯನ್ನು ನಡೆಸಿವೆ. ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ, ಕದಂಬ, ಗಂಗರು ಹಾಗೂ ಬಹಮನಿ ಸುಲ್ತಾನ ಸಾಮ್ರಾಜ್ಯಗಳು ಈ ಭಾಗದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ್ದವು. ಈ ಬಗ್ಗೆ ಮುಂದಿನ ತರಗತಿಗಳಲ್ಲಿ ಹೆಚ್ಚು ತಿಳಿಯುವೆ.

Answer the following questions.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.

1. Mention the names of the two important plateaus in India.
   ಭಾರತದ ಎರಡು ಮುಖ್ಯ ಪ್ರಸ್ಥಭೂಮಿಗಳನ್ನು ಹೆಸರಿಸು.

   _____

   _____

2. Mention the important historical places located in the peninsular plateau.
   ಪರ್ಯಾಯ ಪ್ರಸ್ಥಭೂಮಿಯಲ್ಲಿ ಕಂಡುಬರುವ ಪ್ರಮುಖ ಚಾರಿತ್ರಿಕ ಸ್ಥಳಗಳನ್ನು ಹೆಸರಿಸು.


   _____

   _____

4. The Coastal plains : Now, let us study about the coastal plains. A flat low lying land. Stretching towards the boarder of the sea is called **coastal plain**. India has a long coastal plain. Let us see, how they are located in our country.

ಕರಾವಳಿ ಮೈದಾನಗಳು : ಈಗ ಕಡಲ ತೀರದ ಪರಿಚಯ ಮಾಡಿಕೊಳ್ಳೋಣ. ಸಮುದ್ರದ ಅಂಚಿಗೆ ಚಾಚಿಕೊಂಡಿರುವ ತಗ್ಗಾದ ಭೂ ಪ್ರದೇಶವನ್ನು **ಕರಾವಳಿ ಮೈದಾನ** ಎನ್ನುವರು. ಭಾರತ ದೇಶಕ್ಕೆ ಉದ್ದವಾದ ಕರಾವಳಿ ಪ್ರದೇಶವಿದೆ. ನಮ್ಮ ದೇಶದಲ್ಲಿ ಅವುಗಳನ್ನು ಹೇಗೆ ಗುರುತಿಸಬಹುದು ಎಂದು ತಿಳಿಯೋಣ.

@KTBS NOT TO BE REPUBLISHED



How is the coastal plain extended?

ಕರಾವಳಿ ಮೈದಾನ ಹೇಗೆ ವಿಸ್ತರಿಸಿದೆ?

Observe the map. The western coastal plain lies between the western ghats and the Arabian sea in the west. It extends from the Gulf of Kuchh (Gujarat) in the north to Kanyakumari in the south. The eastern coastal plain lies between the eastern ghats and the Bay of Bengal. It extends from the Gangetic delta in the north to Kanyakumari in the south.

ಭೂಪಟವನ್ನು ಗಮನಿಸು. ಪಶ್ಚಿಮದಲ್ಲಿ ಅರಬ್ಬೀಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಪಶ್ಚಿಮ ಕರಾವಳಿ ಹಬ್ಬಿದೆ. ಇದು ಉತ್ತರದಲ್ಲಿ ಗುಜರಾತಿನ ಕಛ್‌ಖಾರಿಯಿಂದ ದಕ್ಷಿಣದಲ್ಲಿ ಕನ್ಯಾಕುಮಾರಿ ಭೂಶಿರದವರೆಗೂ ವಿಸ್ತರಿಸಿದೆ. ಬಂಗಾಳಕೊಲ್ಲಿ ಮತ್ತು ಪೂರ್ವ ಘಟ್ಟಗಳ ನಡುವೆ ಪೂರ್ವ ಕರಾವಳಿ ಪ್ರದೇಶವಿದೆ. ಇದು ಉತ್ತರದಲ್ಲಿ ಗಂಗಾನದಿ ಮುಖಜ ಭೂಮಿಯಿಂದ ದಕ್ಷಿಣದಲ್ಲಿ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ

NOT TO BE REPUBLISHED © KSTBO

Both the coastal plains of India have major ports. Kandla (Gujarat), Mumbai, Nhava sheva (Maharasthra), Marmagoa(Goa), Nava Mangaluru (Karnataka), Kochi (Kerala), Tuticorin, Chennai, Ennore (Tamilnadu), Vishakhapatanum (Andhra Pradesh), Paradip (Odisha), Haldia and Kolkata (West Bengal) are the major sea ports of India.

ಭಾರತದ ಎರಡೂ ಕರಾವಳಿಯಲ್ಲೂ ಪ್ರಮುಖ ಬಂದರುಗಳನ್ನು ಗುರುತಿಸಲಾಗಿದೆ. ಕಾಂಡ್ಲಾ (ಗುಜರಾತ್), ಮುಂಬಯಿ, ನ್ಹವಶೇವಾ (ಮಹಾರಾಷ್ಟ್ರ), ಮರ್ಮಗೋವ (ಗೋವ), ನವಮಂಗಳೂರು (ಕರ್ನಾಟಕ), ಕೊಚಿ (ಕೇರಳ), ತುತಕುಡಿ, ಚೆನ್ನೈ, ಎನ್ನೋರ್ (ತಮಿಳುನಾಡು), ವಿಶಾಖಪಟ್ಟಣ (ಆಂಧ್ರಪ್ರದೇಶ), ಪಾರಾದೀಪ (ಒಡಿಶಾ), ಹಾಲ್ದಿಯ, ಕೊಲ್ಕತ (ಪಶ್ಚಿಮ ಬಂಗಾಳ) – ಇವು ಭಾರತದ ಪ್ರಮುಖ ಬಂದರುಗಳಾಗಿವೆ.

New Mangaluru port ranks 9th among important ports of India. It is known as the **Gateway of Karnataka**.

ನವ ಮಂಗಳೂರು ಬಂದರು ಭಾರತದ ಪ್ರಮುಖ ಬಂದರುಗಳಲ್ಲಿ 9ನೇ ಸ್ಥಾನದಲ್ಲಿದೆ. ಇದನ್ನು **ಕರ್ನಾಟಕದ ಹೆಬ್ಬಾಗಿಲು** ಎಂದು ಕರೆಯುತ್ತಾರೆ.

The important features of the Coastal Plains

ಕರಾವಳಿ ಪ್ರದೇಶದ ಪ್ರಮುಖ ಲಕ್ಷಣಗಳು

Fishing is the main occupation of the people living in the coastal plains. So, most of the people eat fish and prawn. Spinach, ivy gourd, sambar cucumber and black eyed peas are also eaten for food. Paddy, arecanut, coconut, cashewnut, cardamom, Nendra and Chandra banana and vegetables are grown here. The use of boiled rice is very popular. The houses here have steep sloping roofs, due to heavy rain is common here.

ಮೀನುಗಾರಿಕೆ ಇಲ್ಲಿನ ಜನರ ಪ್ರಮುಖ ಕಸಬು. ಬಹುತೇಕ ಜನರು ಮೀನು ಮತ್ತು ಸೀಗಡಿಯನ್ನು ತಮ್ಮ ಆಹಾರ ಪದಾರ್ಥವಾಗಿ ಬಳಸುತ್ತಾರೆ. ಬಸಳೆ ಸೊಪ್ಪು, ತೊಂಡೆ ಕಾಯಿ, ಸಾಂಬಾರ್ ಸೌತೆ ಮತ್ತು ಅಲಸಂದೆ ಇವುಗಳನ್ನು ಸಹ ಆಹಾರವಾಗಿ ಬಳಸುತ್ತಾರೆ. ಭತ್ತ, ಅಡಿಕೆ, ತೆಂಗು, ಗೇರು, ಏಲಕ್ಕಿ, ನೇಂದ್ರ, ಚಂದ್ರ ಬಾಳೆ ಮತ್ತು ತರಕಾರಿ ಬೆಳೆಗಳನ್ನು ಇಲ್ಲಿ ಕಾಣಬಹುದು. ಕುಚುಲಕ್ಕಿಯ ಸೇವನೆ ಇಲ್ಲಿ ಜನಪ್ರಿಯವಾಗಿದೆ. ಅತೀ ಮಳೆಯ ಕಾರಣವಾಗಿ ಇಳಿಜಾರು ವಿನ್ಯಾಸದ ಮನೆಗಳ ಮೇಲ್ಛಾವಣಿಗಳು ಇಲ್ಲಿ ಸಾಮಾನ್ಯ.

NOT TO BE REPUBLISHED © KTBS

Answer the following questions.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.

- Which sea borders the coast of Karnataka?
  ಕರ್ನಾಟಕದ ಕರಾವಳಿ ಯಾವ ಸಮುದ್ರಕ್ಕೆ ಹೊಂದಿಕೊಂಡಿದೆ?

  _____

- Which districts of Karnataka have coastal plain?
  ಕರ್ನಾಟಕದ ಯಾವ ಜಿಲ್ಲೆಗಳು ಕರಾವಳಿ ಭಾಗಕ್ಕೆ ಸೇರುತ್ತವೆ?

  _____

- Make a list of major crops grown in the western coastal plain of India.
  ಭಾರತದ ಪಶ್ಚಿಮ ಕರಾವಳಿ ಭಾಗದ ಪ್ರಮುಖ ಬೆಳೆಗಳನ್ನು ಪಟ್ಟಿಮಾಡು.

  _____

  _____

- There is a demand for coastal food items of Karnataka. These are exported to other countries. What are they?
  ಕರ್ನಾಟಕದ ಕಡಲ ಆಹಾರ ಪದಾರ್ಥಗಳಿಗೆ ಬಹಳ ಬೇಡಿಕೆಯಿದೆ. ರಾಜ್ಯದಿಂದ ಹೊರದೇಶಗಳಿಗೆ ಇವುಗಳನ್ನು ರಫ್ತು ಮಾಡಲಾಗುತ್ತದೆ. ಅವು ಯಾವುವು?

  _____

  _____

- There are vast, flat shores without streep edges, adjacent to the land. They are called **beaches**. You can watch the sea as far as you can. The striking sea waves bring great delight to your mind. The Ullal, Malpe, Kapu, Om and Maravanthe beaches of Karnataka are attractive and beautiful. Then, which are the other famous beaches of India? Know and write here.

  ಭೂಮಿಗೆ ಹೊಂದಿಕೊಂಡಂತೆ ಇರುವ ಕಡಿದಾದ ಅಂಚುಗಳಿಲ್ಲದ ಸಮತಟ್ಟಾದ ವಿಶಾಲ ಕಡಲತೀರಗಳು ಇವೆ. ಇವುಗಳನ್ನು **ಬೀಚ್‌ಗಳು** ಎಂದು ಕರೆಯುತ್ತಾರೆ. ದೃಷ್ಟಿ

©KTBS NOT TO BE REPUBLISHED

ಹಾಯುವವರೆಗೂ ಕಡಲನ್ನು ನೋಡುತ್ತಿರಬಹುದು. ಅಪ್ಪಳಿಸುವ ಸಮುದ್ರದ ಅಲೆಗಳು ನಿಮ್ಮ ಮನಸ್ಸಿಗೆ ಖುಷಿ ನೀಡುತ್ತವೆ. ಕರ್ನಾಟಕದ ಉಳ್ಳಾಲ, ಮಲ್ಪೆ, ಕಾಪು, ಓಂ ಹಾಗೂ ಮರವಂತೆ ಬೀಚ್‌ಗಳು ನೋಡಲು ಸುಂದರವಾಗಿವೆ. ಹಾಗಿದ್ದರೆ, ನಮ್ಮ ಭಾರತದ ಪ್ರಸಿದ್ಧ ಬೀಚ್‌ಗಳು ಯಾವುವು ಎಂಬುದನ್ನು ತಿಳಿದು ಬರೆ.

_____

_____

_____

- Observe the dress style and food habits of the fishermen living in coastal plains. Write 4 sentences about this.
  ಕರಾವಳಿ ಭಾಗದ ಮೀನುಗಾರರ ವೇಷಭೂಷಣ ಮತ್ತು ಆಹಾರ ಪದ್ಧತಿಯನ್ನು ಗಮನಿಸಿ. ಈ ಬಗ್ಗೆ 4 ವಾಕ್ಯಗಳನ್ನು ಬರೆ.

_____

_____

_____

_____

@KTBS NOT TO BE REPUBLISHED

- The sea coasts are highways for trade and commerce. Some ports provide shelter for ships. On the outline map of India, mark and name the major ports along the eastern and western coasts.
  ಕಡಲ ತೀರಗಳು ವ್ಯಾಪಾರ ವಹಿವಾಟಿನ ಹೆದ್ದಾರಿಗಳು. ಜಲಸಾರಿಗೆಯ ನಿಲ್ದಾಣಗಳು. ಇಲ್ಲಿ ಬಂದರುಗಳಿದ್ದು ಹಡಗುಗಳು ಬಂದು ನಿಲ್ಲುತ್ತವೆ. ಭೂಪಟದ ಸಹಾಯದಿಂದ ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯ ಪ್ರಮುಖ ಬಂದರುಗಳನ್ನು ಗುರುತಿಸಿ, ಹೆಸರಿಸು.

_____ _____ _____

_____ _____ _____

- Collect pictures of a ship. Paste it in the given space. Write 3 sentences about its use.

  ಹಡಗಿನ ಚಿತ್ರವನ್ನು ಸಂಗ್ರಹಿಸಿ ಕೆಳಗೆ ಕೊಟ್ಟಿರುವ ಖಾಲಿ ಜಾಗದಲ್ಲಿ ಅಂಟಿಸಿ, ಇದರ ಉಪಯೋಗದ ಬಗ್ಗೆ 3 ವಾಕ್ಯಗಳನ್ನು ಬರೆ.

@KTBS
NOT TO BE REPUBLISHED

_____

_____

_____

- Locate the following on the outline map of India - Mumbai, Nava Mangaluru, Chennai, Vishakhapatnam and Goa.


  ಭಾರತದ ಭೂಪಟದಲ್ಲಿ ಮುಂಬಯಿ, ನವಮಂಗಳೂರು, ಚೆನ್ನೈ, ವಿಶಾಖಪಟ್ಟಣ ಮತ್ತು ಗೋವಾಗಳನ್ನು ಗುರುತಿಸು.

Desert of India

ಭಾರತದ ಮರುಭೂಮಿ

Locate the state of Rajasthan on the map of India. One can notice that a large part of Rajasthan is a desert. This desert is named **Thar desert**. A part of this desert also extends into Punjab, Haryana and Gujarat states.

ಭಾರತದ ಭೂಪಟದಲ್ಲಿ ರಾಜಸ್ತಾನವನ್ನು ಗುರುತಿಸು. ಬಹುತೇಕವಾಗಿ ಮರುಭೂಮಿಯನ್ನು ನಾವು ರಾಜಸ್ತಾನದಲ್ಲಿ ಕಾಣಬಹುದು. ಈ ಭಾಗದ ಮರುಭೂಮಿಯನ್ನು **ಥಾರ್‌ಮರುಭೂಮಿ** ಎಂದು ಕರೆಯುತ್ತಾರೆ. ಭಾರತದೇಶದ ಪಂಜಾಬ್, ಹರಿಯಾಣ ಹಾಗೂ ಗುಜರಾತ್ ರಾಜ್ಯಗಳಲ್ಲಿಯೂ ಇದು ಭಾಗಶಃ ಹರಡಿಕೊಂಡಿದೆ.





@KTBS NOT TO BE REPUBLISHED

Features of deserts

ಮರುಭೂಮಿಯ ಲಕ್ಷಣಗಳು

- A desert is a vast, dry and sandy area.
  ಮರುಭೂಮಿಯು ವಿಸ್ತಾರವಾದ ಶುಷ್ಕ ಪ್ರದೇಶವಾಗಿದ್ದು, ಮರಳುಮಯವಾಗಿರುತ್ತದೆ.
- The temperature is always high and climate is always dry.
  ಬಿಸಿಲಿನ ತಾಪವಿದ್ದು, ಯಾವಾಗಲೂ ಇಲ್ಲಿ ಒಣ ಹವೆ ಇರುತ್ತದೆ.

- Scarcity of water due to scanty rain. The ground water comes up in the form of springs to the ground surface. This is known as **Oasis**.

  ಇಲ್ಲಿ ನೀರಿನ ಕೊರತೆಯಿದೆ. ಅಂತರ್ಜಲದ ಒರತೆಯು ಚಿಲುಮೆ ರೂಪದಲ್ಲಿ ಕಂಡುಬರುವುದನ್ನು **ಓಯಸಿಸ್** ಎಂದು ಕರೆಯುತ್ತಾರೆ.

- Those plants and trees which have special qualities to withstand the long drought conditions are grown here. They are scrubs, cactus, accacia, thorny bushes etc.,

  ಇಲ್ಲಿ ಸಾಮಾನ್ಯವಾಗಿ ದೀರ್ಘಕಾಲ ಬರಗಾಲ ನಿಭಾಯಿಸಬಲ್ಲ ಕುರುಚಲು ಸಸ್ಯ, ಪಾಪಸ್ ಕಳ್ಳಿಯಂತಹ ಮುಳ್ಳಿನ ಗಿಡಗಳು, ಕತ್ತಾಳೆ, ಜಾಲಿ ಗಿಡಗಳು ಕಂಡುಬರುತ್ತವೆ.

The Aravalli range extends into the eastern fringe of the Thar desert. It prevents the winds blowing from the east and this causes scanty rainfall. Therefore this part has dry climate. Find this area on the map and mark it.

ಥಾರ್ ಮರುಭೂಮಿಯ ಪೂರ್ವದ ಅಂಚಿನಲ್ಲಿ ಅರಾವಳಿ ಪರ್ವತಗಳು ಹರಡಿವೆ. ಇವು ಪೂರ್ವದಿಂದ ಬೀಸಿಬರುವ ಮಾರುತಗಳನ್ನು ತಡೆಯುವುದರಿಂದ ಇಲ್ಲಿ ಮಳೆಯ ಕೊರತೆಯಿದೆ. ಆದ್ದರಿಂದ ಈ ಭಾಗವು ಶುಷ್ಕವಾಗಿರುತ್ತದೆ. ಭೂಪಟದಲ್ಲಿ ಅವುಗಳನ್ನು ಗುರುತಿಸಿ.

Is there any relationship between desert and these pictures? Think about it.

ಈ ಕೆಳಗಿನ ಚಿತ್ರಗಳಿಗೂ, ಮರುಭೂಮಿಗೂ ಏನಾದರೂ ಸಂಬಂಧವಿದೆಯೆ? ಆಲೋಚಿಸು.



© KTBS NOT TO BE REPUBLISHED

The dry climate and the hot sun causes a feeling of severe burning in the body. For some relief from the heat, people wear long robes and turbans.

ಒಣಹವೆ ಮತ್ತು ಸೂರ್ಯನ ತಾಪವು ನೆತ್ತಿಯನ್ನು ಸುಡುತ್ತದೆ. ಇಲ್ಲಿಯ ಜನರು ಪೇಟದಂತೆ ತಮ್ಮ ತಲೆಗೆ ಸುತ್ತಿಕೊಳ್ಳುವ ದೊಡ್ಡದಾದ ರುಮಾಲುಗಳು ಬಿಸಿಲಿನ ಝಳವನ್ನು ಬಹುಮಟ್ಟಿಗೆ ನೀಗಿಸುವುವು.

Scarcity of water and the blazing sun decide the type of desert animals. Camels are able to survive in the desert, because they have broad flat toes which are comfortable to walk on the sand. Their **humps** store fat and sufficient amount of water which lasts for many days. Camels are useful for transporting goods and carrying passengers in the deserts. That is why camel is called as **Ship of the desert.**

ನೀರಿನ ಕೊರತೆ ಮತ್ತು ಬಿಸಿಲಿನ ತಾಪಗಳು ಮರುಭೂಮಿಯ ಪ್ರಾಣಿಗಳ ದೇಹ ರಚನೆಯನ್ನು ನಿರ್ಧರಿಸುತ್ತವೆ. ಒಂಟೆಯು ಮರುಭೂಮಿಯಲ್ಲಿ ಬದುಕಬಲ್ಲ ಪ್ರಾಣಿ. ಏಕೆಂದರೆ ಅದರ ಚಪ್ಪಟೆಯಾದ ಕಾಲುಗಳ ಗೊರಸುಗಳು ಮರಳಿನಲ್ಲಿ ನಡಿಗೆಗೆ ಯೋಗ್ಯವಾಗಿವೆ. ಅದರ ಬೆನ್ನಿನ ಮೇಲಿನ **ಡುಬ್ಬವು** ಅನೇಕ ದಿನಗಳವರೆಗೆ ಬೇಕಾಗುವಷ್ಟು ಮೇದಸ್ಸು ಮತ್ತು ನೀರಿನ ಸಂಗ್ರಹಣೆಗೆ ಅನುಕೂಲಕರವಾಗಿದೆ. ಒಂಟೆಯು ಮರುಭೂಮಿಯ ಜನತೆಗೆ ಪ್ರಯಾಣ ಮತ್ತು ಸರಕು ಸಾಗಿಸಲು ಸಾರಿಗೆಯ ಸಾಧನವಾಗಿ ಬಳಕೆಯಾಗಿದೆ. ಆದ್ದರಿಂದಲೇ ಇದನ್ನು **ಮರುಭೂಮಿಯ ಹಡಗು** ಎಂದು ಕರೆಯುತ್ತಾರೆ.

Do you know this?

- Agricultural activities are found around the Oasis. Bajra, jowar, maize, sesame, dates and chillies are grown here.
  ಓಯಸಿಸ್‌ನ ಬಳಿ ಕೃಷಿ ಚಟುವಟಿಕೆಗಳನ್ನು ಕಾಣಬಹುದು. ಸಜ್ಜೆ, ಜೋಳ, ಮೆಕ್ಕೆಜೋಳ, ಸಾಸಿವೆ, ಖರ್ಜೂರ ಮತ್ತು ಮೆಣಸಿನಕಾಯಿ ಇಲ್ಲಿನ ಪ್ರಮುಖ ಬೆಳೆಗಳಾಗಿವೆ.
- There are some salt lakes in the Thar desert, known as **playas. For example,** Sambhar, Didwana and Sargol lakes.
  ಥಾರ್ ಮರುಭೂಮಿಯಲ್ಲಿ ಕೆಲವು ಉಪ್ಪಿನ ಸರೋವರಗಳು ಕಂಡುಬರುತ್ತವೆ. ಅವುಗಳಿಗೆ **ಪ್ಲಾಯಾ** ಎನ್ನುವರು. **ಉದಾಹರಣೆಗೆ,** ಸಾಂಬಾರ್, ದಿಡ್ವಾನ್, ಸಾರಗೋಲ್ ಸರೋವರಗಳು

© KTBS NOT TO BE REPUBLISHED

- The **Sambhar** lake is the *largest salt lake* in India.
  ಸಾಂಬಾರ್ ಸರೋವರ ಭಾರತದ ಅತಿ ವಿಸ್ತಾರವಾದ ಉಪ್ಪಿನ ಸರೋವರವಾಗಿದೆ.




Know this


You have learnt that the factors of environment and climate have an effect on art and architecture. **Jaipur, Ajmer, Pushkar and Mt. Abu** are places, famous for such architecture in Rajasthan. There are big and beautiful palaces built by experts which are the best examples of architecture in the desert.

ಪರಿಸರ ಮತ್ತು ಹವಾಗುಣದ ಅಂಶಗಳು ವಾಸ್ತುಶಿಲ್ಪಗಳ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿದಿರುವೆ. **ಜೈಪುರ, ಉದಯಪುರ, ಅಜ್ಮೀರ, ಪುಷ್ಕರ್ ಮತ್ತು ಮೌಂಟ್ ಅಬು ರಾಜಸ್ತಾನ**ದ ಪ್ರಸಿದ್ಧ ಸ್ಥಳಗಳಾಗಿವೆ. ಕುಶಲತೆಯಿಂದ ನಿರ್ಮಿಸಿದ ದೊಡ್ಡ ದೊಡ್ಡ ಅರಮನೆಗಳು ಮರುಭೂಮಿಯಲ್ಲಿನ ವಾಸ್ತುಶಿಲ್ಪಕ್ಕೆ ಉದಾಹರಣೆಗಳಾಗಿವೆ.









© KTBS NOT TO BE REPUBLISHED

Write the answer for the following questions.
ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.

1. What is an Oasis?
   ಓಯಸಿಸ್ ಎಂದರೇನು?

_____

_____

_____

2. Write any 3 features of the deserts.
   ಮರುಭೂಮಿಯ ಯಾವುದಾದರೂ 3 ಲಕ್ಷಣಗಳನ್ನು ಬರೆ.

_____

_____

_____

3. Paste a picture of a camel in the given space and write 4 sentences about it.
   ಕೊಟ್ಟಿರುವ ಖಾಲಿ ಜಾಗದಲ್ಲಿ ಒಂಟೆಯ ಚಿತ್ರವನ್ನು ಅಂಟಿಸಿ, ಇದರ ಬಗ್ಗೆ 4 ವಾಕ್ಯಗಳನ್ನು ಬರೆ.

@KTBS NOT TO BE REPUBLISHED

Rivers of India

ಭಾರತದ ನದಿಗಳು

There are many rivers that flow in India. This is one of the natural resources of our country. There is diversity in their origin, direction of flowing and volume of water. Thus the rivers of India can be classified into two groups; rivers of North India and rivers of South India.

ಭಾರತದಲ್ಲಿ ಅನೇಕ ನದಿಗಳು ಹರಿಯುತ್ತವೆ. ದೇಶದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದು. ಇವುಗಳ ಉಗಮ, ಹರಿಯುವ ದಿಕ್ಕು ಮತ್ತು ನೀರಿನ ಪ್ರಮಾಣಗಳಲ್ಲಿ ವೈವಿಧ್ಯತೆ ಇದೆ. ಹೀಗಾಗಿ ಭಾರತದ ನದಿಗಳನ್ನು ಉತ್ತರ ಭಾರತದ ನದಿಗಳು ಮತ್ತು ದಕ್ಷಿಣ ಭಾರತದ ನದಿಗಳು ಎಂದು ವಿಂಗಡಿಸಬಹುದು.

© KTBS NOT TO BE REPUBLISHED

The Rivers of North India : The major river systems of North India are the Indus, the Ganga, the Brahmaputra and their tributaries. Most of them take their birth in the Himalayan mountains. They are perennial rivers. The northern plains are fertile due to the deposition of alluvium carried by the rivers of North India. They are best for agricultural activities. Famous ancient historic and pilgrim centres are situated on the banks of these rivers. **For example,** Delhi, Agra, Varanasi etc.,

ಉತ್ತರ ಭಾರತದ ನದಿಗಳು : ಉತ್ತರ ಭಾರತದ ಪ್ರಮುಖ ನದಿಗಳೆಂದರೆ– ಸಿಂಧೂ, ಗಂಗಾ, ಬ್ರಹ್ಮಪುತ್ರ ಮತ್ತು ಅವುಗಳ ಉಪನದಿಗಳು. ಇವುಗಳಲ್ಲಿ ಬಹಳಷ್ಟು ನದಿಗಳು ಹಿಮಾಲಯ ಪರ್ವತಗಳಲ್ಲಿ ಉಗಮ ಹೊಂದುತ್ತವೆ. ಇವು ಜೀವನದಿಗಳಾಗಿವೆ. ಇವು ಹೊತ್ತು ತಂದು ಸಂಚಯ ಮಾಡಿದ ಮೆಕ್ಕಲು ಮಣ್ಣಿನಿಂದಾಗಿ ಉತ್ತರದ ಮೈದಾನಗಳು ಫಲವತ್ತಾಗಿವೆ. ಇದು ಕೃಷಿಗೆ ಹೆಚ್ಚು ಉಪಯುಕ್ತ. ಈ ನದಿಗಳ ದಂಡೆಯಲ್ಲಿ ಪುರಾಣ ಪ್ರಸಿದ್ಧ ಮತ್ತು ಯಾತ್ರಾಸ್ಥಳಗಳಿವೆ. **ಉದಾಹರಣೆಗೆ,** ದೆಹಲಿ, ಆಗ್ರಾ, ವಾರಣಾಸಿ ಇತ್ಯಾದಿ.

The Rivers of South India : The rivers of south India can be divided into the east-flowing and the west-flowing rivers. The important east-flowing rivers are the Mahanadi, the Godavari, the Krishna, the Kaveri, the Palar and the Pennar. They flow south east and eastwards and join the Bay of Bengal. The important west flowing rivers are the Narmada, the Tapi, the Sharavathi, the Kali, the Netravathi, the Zuari and the Periyar. They flow westwards and join the Arabian Sea. These rivers are short and swift, suitable for the generation of hydro-electricity as they have rapids and waterfalls.

ದಕ್ಷಿಣ ಭಾರತದ ನದಿಗಳು : ದಕ್ಷಿಣ ಭಾರತದ ನದಿಗಳನ್ನು ಪೂರ್ವಕ್ಕೆ ಹರಿಯುವ ಮತ್ತು ಪಶ್ಚಿಮಕ್ಕೆ ಹರಿಯುವ ನದಿಗಳೆಂದು ವಿಂಗಡಿಸಬಹುದು. ಪೂರ್ವಕ್ಕೆ ಹರಿಯುವ ಪ್ರಮುಖ ನದಿಗಳೆಂದರೆ–ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ಪಾಲಾರ್ ಮತ್ತು ಪೆನ್ನಾರ್ ನದಿಗಳು. ಇವು ಆಗ್ನೇಯ ಮತ್ತು ಪೂರ್ವಾಭಿಮುಖವಾಗಿ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತವೆ. ಪಶ್ಚಿಮಕ್ಕೆ ಹರಿಯುವ ಪ್ರಮುಖ ನದಿಗಳೆಂದರೆ–ನರ್ಮದ, ತಾಪಿ, ಶರಾವತಿ, ಕಾಳಿ, ನೇತ್ರಾವತಿ, ಜುವಾರಿ ಮತ್ತು ಪೆರಿಯಾರ್ ನದಿಗಳು. ಇವು ಪಶ್ಚಿಮಕ್ಕೆ ಹರಿದು ಅರಬ್ಬೀಸಮುದ್ರವನ್ನು ಸೇರುವವು. ಇವು ಚಿಕ್ಕವು ಮತ್ತು ತೀವ್ರಗತಿಯಲ್ಲಿ ಹರಿಯುತ್ತವೆ ಹಾಗೂ ಜಲಪಾತಗಳನ್ನು ಸೃಷ್ಟಿಸಿ, ಜಲವಿದ್ಯುಚ್ಛಕ್ತಿ ತಯಾರಿಕೆಗೆ ನೆರವಾಗುತ್ತವೆ.

In recent years the rivers, specially the Ganga-Yamuna rivers have been heavily polluted which has affected their purity.

ಇತ್ತೀಚೆಗೆ ನದಿಗಳು, ಅದರಲ್ಲೂ ಗಂಗಾ–ಯಮುನಾ ನದಿಗಳು ಹೆಚ್ಚು ಮಲಿನಗೊಳ್ಳುತ್ತಿದ್ದು, ಅವುಗಳ ಪರಿಶುದ್ಧತೆಗೆ ಧಕ್ಕೆಯಾಗುತ್ತಿದೆ.

The Climate of India
ಭಾರತದ ವಾಯುಗುಣ

You have already practiced marking the Havaguna Nakshe/ weather map. You have also learnt how to identity the daily weather conditions. What do the following pictures indicate?

ಹವಾಮಾಣ ನಕ್ಷೆ ಗುರುತಿಸುವುದನ್ನು ಈಗಾಗಲೇ ಅಭ್ಯಾಸ ಮಾಡಿರುವೆ. ದಿನದ ಹವಾಮಾಣ ಹೇಗಿದೆ ಎಂಬುದನ್ನು ಕಂಡುಕೊಳ್ಳಲು ಸಹ ಕಲಿತಿರುವೆ. ಈ ಚಿತ್ರಗಳು ಏನನ್ನು ಹೇಳುತ್ತವೆ?

© KTBS NOT TO BE REPUBLISHED






India has a tropical monsoon type of climate. The term **monsoon** is derived from the Arabic word **Mousim** meaning **season**. Thus, the speciality of the climate of India is that it changes from one season to another.

ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ವಿಧದ ವಾಯುಗುಣವಿದೆ. ಮಾನ್ಸೂನ್ ಪದವು ಅರಬ್ ಭಾಷೆಯ **ಮೌಸಿಮ್** ಶಬ್ದದಿಂದ ಬಂದಿದೆ. **ಮೌಸಿಮ್** ಎಂದರೆ **ಋತುಕಾಲಿಕ** ಎಂದರ್ಥ. ಅಂದರೆ ಭಾರತದ ವಾಯುಗುಣವು ಒಂದು ಋತುವಿನಿಂದ ಮತ್ತೊಂದು ಋತುವಿಗೆ ಬದಲಾಗುವುದೇ ವಿಶೇಷ.

Hence we can see the diversity in the climate of India. There are 4 seasons in India-winter season, summer season, south west monsoon season and retreating monsoon season. The weather changes during the day, sometimes it is cool, another time it is hot and sometimes it is cloudy. Why is it so? Think.

ಹೀಗಾಗಿ ಭಾರತದಲ್ಲಿ ವೈವಿಧ್ಯತೆಯಿಂದ ಕೂಡಿದ ವಾಯುಗುಣವನ್ನು ಕಾಣಬಹುದು. ಚಳಿಗಾಲ, ಬೇಸಿಗೆಕಾಲ, ನೈಋತ್ಯ ಮಾನ್ಸೂನ್ ಮಾರುತಗಳ ಕಾಲ (ಮುಂಗಾರು ಮಳೆಗಾಲ) ಮತ್ತು ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ (ಹಿಂಗಾರು ಮಳೆಗಾಲ)ದ ಋತುಗಳು ನಮ್ಮ ಅನುಭವಕ್ಕೆ ಬರುತ್ತವೆ. ದಿನದ ಹವಾಮಾನದಲ್ಲಿ ಒಮ್ಮೊಮ್ಮೆ ತಂಪು ಎನಿಸಿದರೆ, ಮತ್ತೊಮ್ಮೆ ಬಿಸಿ ಎನಿಸುತ್ತದೆ. ಕೆಲವೊಮ್ಮೆ ಮೋಡ ಮುಸುಕಿರುತ್ತದೆ. ಏಕೆ ಹೀಗೆ? ಆಲೋಚಿಸು.

© KTBS NOT TO BE REPUBLISHED

The dry air, rain carring winds, swift monsoons - retreating and the natural calamities like cyclones adversely effect the climate of India. Consequently we find the sudden changes taking place in the climate.

ಒಣಹವೆ, ಮಳೆ ಮಾರುತಗಳು, ಬೀಸಿಬರುವ ಮುಂಗಾರು–ಹಿಂಗಾರು ಮಾರುತಗಳು ಜೊತೆಗೆ ಪ್ರಾಕೃತಿಕ ವಿಕೋಪಗಳಾದ ಚಂಡಮಾರುತಗಳಿಂದ ಉಂಟಾಗುವ ಪ್ರತಿಕೂಲ ಪರಿಸರವು ಸಹ ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುತ್ತದೆ. ಇದರಿಂದಾಗಿ ಆಕಸ್ಮಿಕ ವ್ಯತ್ಯಾಸಗಳಾಗುವುದನ್ನು ಕಾಣಬಹುದು.

The climate of India can be classified into 4 distinct seasons. They are -

ಭಾರತ ದೇಶದಲ್ಲಿ ಕಂಡುಬರುವ ವಾರ್ಷಿಕ ವಾಯುಗುಣವನ್ನು 4 ಋತುಮಾನಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ–

Seasons **ಋತುಮಾನಗಳು**	**Duration (months)** **ಅವಧಿ (ತಿಂಗಳು)**
1. Winter ಚಳಿಗಾಲ	December, January, February ಡಿಸೆಂಬರ್, ಜನವರಿ, ಫೆಬ್ರವರಿ
2. Summer ಬೇಸಿಗೆಕಾಲ	March, April, May ಮಾರ್ಚ್, ಏಪ್ರಿಲ್, ಮೇ
3. South-West monsoon (Rainy season/Kharif) ನೈಋತ್ಯ ಮಾನ್ಸೂನ್ ಮಾರುತಗಳ ಕಾಲ (ಮುಂಗಾರು ಮಳೆಗಾಲ)	June, July, August, September ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್
4. Retreating monsoon (Rabi season) ಮಾನ್ಸೂನ್ ಮಾರುತಗಳ ನಿರ್ಗಮನಕಾಲ (ಹಿಂಗಾರು ಮಳೆಗಾಲ)	October, November ಅಕ್ಟೋಬರ್, ನವಂಬರ್

@KTBS NOT TO BE REPUBLISHED

Locate the direction of North-East, North-West, South-East, South-West, on the map of India. India receives heavy rain from the south-west monsoon winds.

ಭಾರತದ ಭೂಪಟದಲ್ಲಿ ಆಗ್ನೇಯ, ನೈಋತ್ಯ, ವಾಯವ್ಯ ಮತ್ತು ಈಶಾನ್ಯ ದಿಕ್ಕುಗಳನ್ನು ಗುರುತಿಸಿ. ಭಾರತದ ನೈಋತ್ಯದಿಂದ ಬೀಸುವ ಮಾರುತಗಳಿಂದ ಮಳೆಯಾಗುತ್ತದೆ.

The movement of air over the earth's surface, from high pressure area to low pressure area in the specific time is called **wind**. The winds which change their direction from one season to another are known as **seasonal winds**. **For Example,** monsoon winds.

ನಿರ್ದಿಷ್ಟ ಕಾಲದಲ್ಲಿ ಅಧಿಕ ಒತ್ತಡವುಳ್ಳ ಭಾಗದಿಂದ ಕಡಿಮೆ ಒತ್ತಡವುಳ್ಳ ಭಾಗಗಳಿಗೆ ಬೀಸುವಂತಹ ವಾಯುವಿನ ಚಲನೆಯನ್ನು **ಮಾರುತಗಳು** ಎನ್ನುತ್ತಾರೆ. ಒಂದು ಋತುವಿನಿಂದ ಮತ್ತೊಂದು ಋತುವಿಗೆ ದಿಕ್ಕನ್ನು ಬದಲಿಸಿಕೊಂಡು ಬೀಸುವ ಮಾರುಗಳಿಗೆ ಋತುಕಾಲಿಕ ಮಾರುತಗಳು ಎನ್ನುವರು. **ಉದಾಹರಣೆಗೆ,** ಮಾನ್ಸೂನ್ ಮಾರುತಗಳು.



Know this

- There are two rainy seasons in India. They are South West Monsoon Season from June to September and Retreating Monsoon Season from October to November.

  ಎರಡು ರೀತಿಯ ಮಳೆಗಾಲವನ್ನು ನಮ್ಮ ದೇಶದಲ್ಲಿ ಕಾಣುತ್ತೇವೆ. ಅವುಗಳೆಂದರೆ– ಜೂನ್‌ನಿಂದ ಸೆಪ್ಟಂಬರ್‌ವರೆಗೆ ನೈಋತ್ಯ ಮಾನ್ಸೂನ್ ಮಾರುತಗಳ ಕಾಲ ಹಾಗೂ ಅಕ್ಟೋಬರ್‌ನಿಂದ ನವಂಬರ್‌ವರೆಗೆ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ.

- The Western coastal plains, western parts of the Western Ghats and North-eastern states receive heavy rainfall.

  ಪಶ್ಚಿಮ ತೀರ ಪ್ರದೇಶ, ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ ಮತ್ತು ಈಶಾನ್ಯ ರಾಜ್ಯಗಳಲ್ಲಿ ಅಧಿಕ ಮಳೆಯಾಗುತ್ತದೆ.

- **Mawsynram** in Meghalaya receives the highest rainfall in India.

  ಮೇಘಾಲಯದ **ಮೌಸಿನ್ರಾಮ್** ಎಂಬುದು ಭಾರತದಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದೆ.

@KTBS NOT TO BE REPUBLISHED

Activity : The situations related to the effects of heavy rainfall are given here. Put (✓) mark to the suitable situation. If not suitable put (X) mark.

ವಿಪರೀತ ಮಳೆಯಿಂದಾಗುವ ಪರಿಣಾಮಗಳಿಗೆ ಸರಿ ಹೊಂದುವ ಸನ್ನಿವೇಶಗಳಿಗೆ (✓) ಎಂದು, ಇಲ್ಲದಿದ್ದರೆ (×) ಎಂದು ಗುರುತಿಸು.

1. The people are very happy. ☐
   ಜನರು ತುಂಬಾ ಸಂತೋಷ ಪಡುತ್ತಾರೆ.

2. The roads are flooded with water. ☐
   ರಸ್ತೆಗಳೆಲ್ಲಾ ನೀರಿನಿಂದ ತುಂಬಿಕೊಳ್ಳುತ್ತವೆ.

3. No water is flowing in the streams and rivers. ☐
   ಹಳ್ಳಕೊಳ್ಳಗಳಲ್ಲಿ ನೀರೇ ಹರಿಯುವುದಿಲ್ಲ.

4. Electricity is cut off. ☐
   ವಿದ್ಯುತ್ ಸಂಪರ್ಕ ಕಡಿದು ಹೋಗುತ್ತದೆ.

5. Fodder is available for livestock. ☐
   ಜಾನುವಾರುಗಳಿಗೆ ಮೇವು ದೊರಕುತ್ತದೆ.

6. It is easy for fishing in the sea. ☐
   ಸಮುದ್ರದಲ್ಲಿ ಮೀನು ಹಿಡಿಯುವುದು ಬಹಳ ಸುಲಭ.

7. The people may lose their houses and become refugees. ☐
   ಮನೆ – ಮಠ ಕಳೆದುಕೊಂಡು ಜನರು ನಿರಾಶ್ರಿತರಾಗುವರು.

@KTBS NOT TO BE REPUBLISHED

- Collect the information which you have gained from the study of weather conditions in school till now. Explain about the changes in weather conditions from the information collected by you.

  ಇದುವರೆಗೂ ಶಾಲೆಯಲ್ಲಿ ನೀನು ಗಮನಿಸಿರುವ ಹವಾಮಾನದ ಮಾಹಿತಿಗಳನ್ನು

ಒಟ್ಟುಗೂಡಿಸು. ನಿನಗೆ ಸಿಗುವ ಮಾಹಿತಿಯಿಂದ ಒಟ್ಟಾರೆ ಹವಾಗುಣದ ಸ್ಥಿತಿ ಏನಿತ್ತು ಎಂಬುದನ್ನು ತಿಳಿಸು.

_____

_____

_____

- Which parts of India were affected for the last two years by cyclones. Collect information on them and write here.
  ಕಳೆದ 2 ವರ್ಷಗಳಲ್ಲಿ ಭಾರತದಲ್ಲಿ ಎಲ್ಲೆಲ್ಲಿ ಚಂಡಮಾರುತಗಳು ಸಂಭವಿಸಿದವು? ಮಾಹಿತಿಯನ್ನು ಸಂಗ್ರಹಿಸಿ, ಆ ಬಗ್ಗೆ ಬರೆ.

_____

_____

_____

_____

- Select a suitable picture, which shows destruction after heavy rain or continuous downpour. Paste it in the blank space.
  ಅತಿಯಾದ ಅಥವಾ ಧಾರಾಕಾರ ಮಳೆಯಿಂದ ಉಂಟಾದ ಪರಿಸ್ಥಿತಿಯ ಬಗ್ಗೆ ಸೂಕ್ತ ಚಿತ್ರವೊಂದನ್ನು / ಸನ್ನಿವೇಶವನ್ನು ಸಂಗ್ರಹಿಸಿ ಅಂಟಿಸು.

@KTBS NOT TO BE REPUBLISHED

Observe : Drought occurs when there is a failure in timely rainfall. There will not be water for crops. Livestock and other animals wander about in search of water and may die. There will not be water, due to excessive heat mouths get dry. There will be chaos on the earth. People migrate to other places. These are the effects of drought.

ಸಕಾಲಕ್ಕೆ ಬೀಳಬೇಕಾದ ಮಳೆ ಬಾರದಿದ್ದಾಗ ಬರಗಾಲ ಎದುರಾಗುತ್ತದೆ. ಬೆಳೆಗೆ ನೀರಿಲ್ಲದಂತಾಗುತ್ತದೆ. ಜಾನುವಾರುಗಳು, ಪ್ರಾಣಿಗಳು ನೀರಿಗಾಗಿ ಅಲೆಯುತ್ತವೆ ಮತ್ತು ಸಾಯುತ್ತವೆ. ಕುಡಿಯಲು ನೀರಿಲ್ಲ, ಬಿಸಿಲ ದಗೆಯಿಂದ ಬಾಯಿ ಒಣಗುತ್ತದೆ. ಭೂಮಿಯಲ್ಲಿ ಎಲ್ಲೆಲ್ಲೂ ಹಾಹಾಕಾರ. ಜನರು ವಲಸೆ ಹೋಗುತ್ತಾರೆ. ಇವು ಬರಗಾಲದಿಂದಾಗುವ ಪರಿಣಾಮಗಳು.

A challenge to you / ನಿನಗೊಂದು ಸವಾಲು

There is excess of heat on the earth. The ground water is drying up and the snow in the Himalayan mountains are melting. What are the reasons for these? Think about it and discuss with your friends. Write here.

ಭೂಮಿ ಕಾಯುತ್ತಿದೆ. ಅಂತರ್ಜಲ ಬತ್ತುತ್ತಿದೆ. ಹಿಮಾಲಯ ಪರ್ವತಗಳಲ್ಲಿ ಹಿಮ ಕರಗುತ್ತಿದೆ. ಇದಕ್ಕೆ ಕಾರಣಗಳೇನು? ಆಲೋಚಿಸು ಮತ್ತು ಗೆಳೆಯ/ಗೆಳತಿಯರೊಂದಿಗೆ ಚರ್ಚಿಸಿ, ಇಲ್ಲಿ ಬರೆ.

© KTBS NOT TO BE REPUBLISHED

How are we benefitted by the broadcast of weather report in radio, TV and news papers? Make a list of the benefits.

ರೇಡಿಯೊ, ಟಿವಿ ಹಾಗೂ ದಿನಪತ್ರಿಕೆಗಳಲ್ಲಿ ಪ್ರಸಾರವಾಗುವ ಹವಾಮಾನ ವರದಿಗಳಿಂದ ನಮಗಾಗುವ ಅನುಕೂಲಗಳೇನು? ಪಟ್ಟಿಮಾಡು.

_____

_____

_____

Diversity of Plants and Animals in India

ಭಾರತದ ಸಸ್ಯ ಮತ್ತು ಪ್ರಾಣಿಗಳ ವೈವಿಧ್ಯತೆ

Read the instructions about how you know the animals and plants given below. Mark (✓) to the applicable. If not, put (×) mark.

ಇಲ್ಲಿ ಕೊಟ್ಟಿರುವ ಪ್ರಾಣಿ ಮತ್ತು ಸಸ್ಯಗಳನ್ನು ನೀನು ನೋಡಿರುವ ಬಗ್ಗೆ ನೀಡಲಾದ ಸೂಚನೆಯನ್ನು ಓದಿ, ಅನ್ವಯಿಸುವುದಕ್ಕೆ (✓) ಎಂದೂ, ಇಲ್ಲದಿದ್ದರೆ (×) ಎಂದು ಗುರುತು ಮಾಡು.

@KTBS NOT TO BE REPUBLISHED

Animals ಪ್ರಾಣಿಗಳು	**Actually seen** ನಿಜವಾಗಿಯೂ ನೋಡಿದ್ದೇನೆ	**Seen in pictures** ಚಿತ್ರಗಳಲ್ಲಿ ನೋಡಿದ್ದೇನೆ	**Never seen** ನೋಡಿಯೇ ಇಲ್ಲ
			

Plants ಸಸ್ಯಗಳು	**Actually seen** ನಿಜವಾಗಿಯೂ ನೋಡಿದ್ದೇನೆ	**Seen in pictures** ಚಿತ್ರಗಳಲ್ಲಿ ನೋಡಿದ್ದೇನೆ	**Never seen** ನೋಡಿಯೇ ಇಲ್ಲ
			
			

@KTBS NOT TO BE REPUBLISHED

Just as there is a diversity in the physical features of India, there is also diversity in the types of plants and animals.

ಭಾರತದ ಪ್ರಾಕೃತಿಕ ಲಕ್ಷಣಗಳಲ್ಲಿ ವಿವಿಧತೆಯಿರುವಂತೆ ಸಸ್ಯ ಮತ್ತು ಪ್ರಾಣಿಗಳಲ್ಲೂ ವೈವಿಧ್ಯತೆಯಿದೆ.

@KTBS NOT TO BE REPUBLISHED

Instruction to the Teachers / ಶಿಕ್ಷಕರಿಗೆ ಸೂಚನೆ

Use geo maps, provide facility to the students to watch thick forest areas. Facilitate to observe at the forests of Assam, Gir forest of Gujarat, Vegetation of the Himalayan mountains, forests of the Western Ghats, the Eastern Ghats, Anantha giri forests etc.

